# PRERANA

## Social Welfare Centre, Jagalur

**[Unit of Carmel Jyothi NGO®]**


Near A.P.M.C, Davanagere Road, Jagaluru 577528




# ಪ್ರೇರಣಾ ಸಮಾಜ ಸೇವಾ ಸಂಸ್ಥೆ (ರಿ)

ಎ.ಪಿ.ಎಂ.ಸಿ ಹತ್ತಿರ, ದಾವಣಗೆರೆ ರಸ್ತೆ, ಜಗಳೂರು - 577528

## 2020-2021


ST JOSEPH
CHURCH
Mira Road
With best wishes
from
St. Joseph Church
Mira Road, Mumbai
ST JOSEPH
CHURCH

# PRERANA SOCIAL WELFARE CENTRE

[Unit of Carmel Jyothi NGO®]
Near APMC, Davanagere Road, Jagaluru 577528
www.carmeljyothitrust.com

# ಸ್ಮರಣ ಸಂಚಿಕೆ



## ಪ್ರೇರಣಾ ಸಮಾಜ ಸೇವಾ ಸಂಸ್ಥೆ (ರಿ)

ಎ.ಪಿ.ಎಂ.ಸಿ ಹತ್ತಿರ, ದಾವಣಗೆರೆ ರಸ್ತೆ, ಜಗಳೂರು - 577528

# *We work hand in hand*




**Fr. William Miranda, OCD**
Superior and Director



**Fr. Kevin Fernandes, OCD**
Procurator




**Fr. Anthon Souz, OCD**



**Fr. Sunil Dsouza, OCD**
Asst. Director



**Fr. Vishan Vinu Monis, OCD**
Deacon



**Br. Stany Pinto, OCD**
Regent



**Mrs. Geetha**
Tailoring Teacher



**Mr. Santhosh**
Supporting Staff



**Mr. Francis**
Supporting Staff

# *Director's Desk*



"If I speak in the tongues of men or of angels, but do not have love, I am only a resounding gong or a clanging cymbal. If I have the gift of prophecy and can fathom all mysteries and all knowledge, and if I have a faith that can move mountains, but do not have love, I am nothing.  If I give all I possess to the poor and give over my body to hardship that I may boast, but do not have love, I gain nothing.

"Love is patient, love is kind. It does not envy, it does not boast, it is not proud. It does not dishonour others, it is not self-seeking, it is not easily angered, it keeps no record of wrongs. Love does not delight in evil but rejoices with the truth. It always protects, always trusts, always hopes, and always perseveres.  And now these three remain: faith, hope and love. But the greatest of these is love."

When there is selfless love then we can see everybody equally without considering caste, religion and language. When there is true love, we can see and understand the reality of a person, his/her problems and sufferings and that makes us to reach out to the needy. Jesus is the true model and example for this. He served the people who were in need, sick, and the helpless. We are called to serve and love everyone equally.  I am happy to say that I got an opportunity to serve the people of all religions.

As I thank the Lord I also thank my family members, my community members and staff, my Province and all the people who supported me to be a successful servant. Special thanks to all the benefactors for their financial support. May God bless them and their families.  I am also grateful to all the officials of Jagalur, media and press reporters, to all the Associations. I am happy to bring out this documentary book of Jagalur for the year 2020-2021. Let's love the Lord through love of neighbour. God bless you all.

Mobile: +91 89708 69290
Email: speak2willy@gmail.com

**Fr. William Miranda, OCD**
Director
Prerana Social Welfare Centre
Jagalur



# ನಿರ್ದೇಶಕರ ನುಡಿ

ನಾನು ಮನುಷ್ಯರ ಮತ್ತು ದೂತರ ಭಾಷೆಗಳನ್ನು ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. ನನಗೆ ಪ್ರವಾದನ ವರವಿದ್ದರೂ ಎಲ್ಲಾ ರಹಸ್ಯಗಳನ್ನು ಮತ್ತು ಸಕಲ ಜ್ಞಾನವನ್ನು ತಿಳಿದುಕೊಂಡವನಾಗಿದ್ದರೂ ಬೆಟ್ಟಗಳನ್ನು ತೆಗೆದಿಡುವದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ.

ನನಗಿರುವದೆಲ್ಲವನ್ನು ಬಡವರಿಗೆ ಅನ್ನದಾನ ಮಾಡಿದರೂ ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವದಿಲ್ಲ. ಪ್ರೀತಿ ಬಹು ತಾಳ್ಮೆಯುಳ್ಳದ್ದು, ಕರುಣೆಯುಳ್ಳದ್ದು; ಪ್ರೀತಿಯು ಹೊಟ್ಟೇಕಿಚ್ಚು ಪಡುವದಿಲ್ಲ, ಹೊಗಳಿಕೊಳ್ಳುವದಿಲ್ಲ, ಉಬ್ಬಿಕೊಳ್ಳುವದಿಲ್ಲ, ಮರ್ಯಾದೆ ಗೆಟ್ಟು ನಡೆಯುವದಿಲ್ಲ, ಸ್ವಾರ್ಥತೆಯನ್ನು ಬಯಸುವದಿಲ್ಲ, ಬೇಗನೆ ಕೋಪಗೊಳ್ಳುವದಿಲ್ಲ, ಕೆಟ್ಟದ್ದನ್ನು ಯೋಚಿಸುವದಿಲ್ಲ. ಅನ್ಯಾಯದಲ್ಲಿ ಸಂತೋಷಪಡದೆ ಸತ್ಯದಲ್ಲಿಯೇ ಸಂತೋಷಪಡುತ್ತದೆ. ಎಲ್ಲವನ್ನೂ ಸಹಿಸಿಕೊಳ್ಳುತ್ತದೆ, ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ತಾಳಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ, ಹೀಗೆ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಆದರೆ ಇವುಗಳಲ್ಲಿ ದೊಡ್ಡದು ಪ್ರೀತಿಯೇ. ಈ ಮೂರು ಮೌಲ್ಯಗಳನ್ನು ಮೈಗೂಡಿಸಿಕೊಂಡು ಪ್ರೇರಣ ಸಮಾಜ ಸೇವಾ ಸಂಸ್ಥೆಯು ಜಗಳೂರು ತಾಲ್ಲೂಕಿನ ಜನರ ಸೇವೆ ಮಾಡುತ್ತಾ ಬಂದಿದೆ. ಪ್ರೀತಿಗೆ ಜಾತಿ, ಮತ, ಭಾಷೆ, ಲಿಂಗ ಯಾವುದೂ ಇಲ್ಲ. ಪ್ರತಿಯೊಬ್ಬರೂ ಸಮಾನರು. ಇಂತಹ ಭಾವನೆಯಿಂದ ಸೇವೆ ಸಲ್ಲಿಸುತ್ತಿರುವ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಮುಖಾಂತರ ಜಗಳೂರು ತಾಲ್ಲೂಕಿನ ಸಾವಿರಾರು ಜನರಿಗೆ ಅನುಕೂಲವಾಗಿದೆ. ಮುಖ್ಯವಾಗಿ ಆರೋಗ್ಯ, ಸ್ವ–ಉದ್ಯೋಗ ಮತ್ತು ಶಿಕ್ಷಣ. ಇದರ ಸಂಕ್ಷಿಪ್ತ ಮಾಹಿತಿಯನ್ನು ಪುಸ್ತಕದಲ್ಲಿ ಮುದ್ರಿಸಲು ಸಂತೋಷವಾಗುತ್ತದೆ.

ಈ ಸಂದರ್ಭದಲ್ಲಿ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಎಲ್ಲಾ ಸೇವಾ ಕಾರ್ಯಗಳ ಯಶಸ್ವಿಗೆ ಸಹಕರಿಸಿದ ಕಾರ್ಮೆಲ್ ಸಭೆಗೆ, ಜಗಳೂರು ತಾಲ್ಲೂಕಿನ ಎಲ್ಲಾ ಅಧಿಕಾರಿಗಳು, ಸಂಘ ಸಂಸ್ಥೆಗಳು, ಎಲ್ಲಾ ಪದಾಧಿಕಾರಿಗಳು, ಮಾದ್ಯಮ ಹಾಗೂ ಪತ್ರಕರ್ತರು, ಎಲ್ಲಾ ದಾನಿಗಳು ಹಾಗೂ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಫಾದರ್ಸ್ ಹಾಗೂ ಸಿಬ್ಬಂದಿಯವರಿಗೂ, ಪ್ರತ್ಯಕ್ಷ, ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃದಯಾಳದ ಕ್ರತಜ್ಞತೆಗಳು. ಪರರ ಸೇವೆಯೇ ಪರಮಾತ್ಮನ ಸೇವೆ ಎಂಬ ನಾನ್ನುಡಿಯಂತೆ ನಮ್ಮ ಜೀವನ ರೂಪಿಸೋಣ. ಎಲ್ಲರಿಗೂ ದೇವರು ಆಶೀರ್ವದಿಸಲಿ

Mobile: +91 89708 69290
Email: speak2willy@gmail.com

**ವಂ. ವಿಲಿಯಂ ಮಿರಾಂದ, ಒಸಿಡಿ**
ಪ್ರೇರಣಾ ಸಮಾಜ ಸೇವಾ ಕೇಂದ್ರ
ಜಗಳೂರು



*Most Rev. Dr. Francis Serrao*
*Bishop of Shimoga*


Bishop's House
Malligenhalli, Sagar Road
Shimoga - 577 205
Karnataka - INDIA
Cell: +9194483 55813
Email: bpfrancisserraosj@gmail.com


# Message

The Carmelite Friars at Jagalur under the able leadership of Rev. Fr William Miranda have been very active not only in faith formation, liturgical celebrations and family apostolate, but also have been effectively reaching out to the deprived and the disadvantaged far beyond the confines of the catholic community with their work of conscientization, peoples organization, self help groups, micro economic projects, skills imparting and youth empowerment.

While appreciating their hard work and thanking them for their great contribution to the integral growth and development not only of the catholic community but also the wider citizenry, irrespective of caste,creed, class and culture, I pray that the good Lord continues to accompany them in this difficult but fulfilling venture so that all their initiatives and programmes bear abundant fruit for the emancipation, education and empowerment of the last, the least and the lost

DIOCESE OF SHIMOGA

✠ **Francis Serrao**
Bishop of Shimoga



*Most Rev. Dr. Francis Serrao*
*Bishop of Shimoga*

Bishop's House
Malligenhalli, Sagar Road
Shimoga - 577 205
Karnataka - INDIA
Cell: +9194483 55813
Email: bpfrancisserraosj@gmail.com

# ಸಂದೇಶ

ಜಗಳೂರಿನ ಕಾರ್ಮೆಲ್ ಸಭೆಯ ಗುರುಗಳು ವಂದನೀಯ ವಿಲಿಯಂರವರ ಸಮರ್ಥ ನಾಯಕತ್ವದಲ್ಲಿ ಕ್ರೈಸ್ತ ವಿಶ್ವಾಸವನ್ನು ಬೆಳೆಸುವುದರಲ್ಲಿ ಮಾತ್ರವಲ್ಲ ಧಾರ್ಮಿಕ ಆಚರಣೆಗಳು ಮತ್ತು ಕುಟುಂಬಗಳ ಸಬಲೀಕರಣದ ಕಾರ್ಯಗಳಲ್ಲಿ ತುಂಬಾ ಸಕ್ರಿಯವಾಗಿದ್ದು, ಅವರ ಅರಿವು ಮೂಡಿಸುವ ಕೆಲಸ, ಜನರ ಸಂಘಟನೆ, ಸ್ವಸಹಾಯ ಗುಂಪುಗಳು, ಸೂಕ್ಷ್ಮ ಆರ್ಥಿಕ ಯೋಜನೆಗಳು, ಕೌಶಲ್ಯ ತರಬೇತಿ ಮತ್ತು ಯುವ ಸಬಲೀಕರಣದ ಯೋಜನೆಗಳ ಮೂಲಕ ಕ್ರೈಸ್ತ ಕಥೋಲಿಕ ಸಮುದಾಯದ ಸೀಮೆಯ ಒಳಗೂ ಹೊರಗೂ ಇರುವ ಅನೇಕ ವಂಚಿತರನ್ನು ಮತ್ತು ಹಿಂದುಳಿದವರನ್ನು ತಲುಪುತ್ತಿದ್ದಾರೆ..

ಅವರ ಶ್ರಮವನ್ನು ಶ್ಲಾಘಿಸುತ್ತಾ, ಕಥೋಲಿಕ ಸಮುದಾಯದ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅವರು ನೀಡಿದ ಮಹತ್ತರವಾದ ಕೊಡುಗೆಗಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ, ಜಾತಿ, ಧರ್ಮ, ವರ್ಗ ಮತ್ತು ಸಂಸ್ಕೃತಿಯನ್ನು ಲೆಕ್ಕಿಸದೆ ಸಾಮರಸ್ಯ ಮತ್ತು ಸೋದರತ್ವಕ್ಕಾಗಿ ಅವರು ಮಾಡುವ ಕಷ್ಟಕರವಾದ ಆದರೆ ಸಂತೃಪ್ತಿಯನ್ನು ನೀಡುವ ಸಾಹಸದಲ್ಲಿ ಅವರು ಕೈಗೆತ್ತಿಕೊಳ್ಳುವ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳು ಕನಿಷ್ಟರ, ನಿರ್ಗತಿಕರ ಹಾಗೂ ಬಡವರ ವಿಮೋಚನೆ, ಶಿಕ್ಷಣ ಮತ್ತು ಸಬಲೀಕರಣದಲ್ಲಿ ಹೇರಳವಾದ ಪ್ರತಿಫಲವನ್ನು ನೀಡಲು ಸರ್ವಶಕ್ತ ದೇವರು ಅವರಿಗೆ ನೆರವನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

**✠ ಅತೀ ವಂದನೀಯ ಫ್ರಾನ್ಸಿಸ್ ಸೆರಾವೊ**
ಶಿವಮೊಗ್ಗದ ಧರ್ಮಾಧ್ಯಕ್ಷರು



# *Message*

Our Karnataka-Goa Province is celebrating the ruby Jubilee of its existence (1981-2021). When we look into the growth of our Province, we see that it has bloomed into a flourishing unit of the Carmelite Order, equipped for the service of God's Kingdom through its spiritual, academic, missionary, publishing, and other social institutions.

Among our Social centres, "Prerana" has made a name in the recent years, especially after the arrival of Fr. William Miranda as Superior and the Director of the Centre. The community of our friars along with the Director have been working selflessly for the needy people of all faiths. I am aware of their remarkable activities towards the social upliftment through medical camps, awareness programmes and rural education.

Amidst the gloom of the pandemic, the friars of the community have demonstrated themselves as Corona warriors! They have stretched out their hands to reach out to the least and the last of the poor and the needy and have brought smile on the faces of many as you will see yourself, turning the pages of this Souvenir. All of us share in the joy of the relief brought to so many needy individuals and families. I am sure, that their self-sacrificing social activity has sprung from the Gospel motto: "whatsoever you did to the least of my brethren, you did it to me".

Of course, all this has been possible especially because of the generosity of our benefactors and the cooperation of many generous hearts that have come forward in support of this noble task. As I thank God for all these benefactors, I also assure my sincere prayers for their intentions.

I have no words with which to appreciate Fr. William Miranda who has been the soul behind this shining example of Christian charity and the friars of the Jagalur community who have been silently working for the kingdom of God. Indeed, their actions speak louder than my words. I remain grateful to all the friars of the community and sincerely congratulate them.

Praying God's abundant blessings on "Prerana" Social Centre and the friars of the community, I remain,.



**Fr. Pius James D'Souza OCD**
Provincial Superior



# ಸಂದೇಶ

ನಮ್ಮ ಕರ್ನಾಟಕ–ಗೋವಾ ಪ್ರಾಂತ್ಯವು ಅಸ್ಥಿತ್ವಕ್ಕೆ ಬಂದ 40 ವರ್ಷಗಳ ಮಹೋತ್ಸವವನ್ನು ಆಚರಿಸುತ್ತಿದೆ (1981–2021). ನಮ್ಮ ಈ ಪ್ರಾಂತ್ಯದ ಬೆಳವಣಿಗೆಯನ್ನು ನೋಡಿದಾಗ, ಆಧ್ಯಾತ್ಮಿಕ, ಶೈಕ್ಷಣಿಕ, ಸೇವಾಕಾರ್ಯ, ಪ್ರಕಾಶನ ಮತ್ತು ಇತರ ಸಾಮಾಜಿಕ ಸಂಸ್ಥೆಗಳ ಮೂಲಕ ದೇವರ ರಾಜ್ಯದ ಸೇವೆಯಲ್ಲಿ ತೊಡಗಿಸಿಕೊಂಡು ಅದು ಕಾರ್ಮೆಲ್ ಸಭೆಯ ಒಂದು ಅಂಗವಾಗಿ ಪ್ರವರ್ಧಮಾನಕ್ಕೆ ಬಂದಿರುವುದು ತಿಳಿದುಬರುತ್ತದೆ.

ನಮ್ಮ ಸಾಮಾಜಿಕ ಕೇಂದ್ರಗಳಲ್ಲಿ, "ಪ್ರೇರಣಾ" ಸಂಸ್ಥೆಯು, ಫಾದರ್ ವಿಲಿಯಂ ಮಿರಾಂದಾರವರು ಇಲ್ಲಿನ ಮಠಾಧಿಪತಿ ಹಾಗೂ ನಿರ್ದೇಶಕರಾಗಿ ಆಗಮಿಸಿದ ನಂತರ ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಹೆಸರನ್ನು ಮಾಡಿದೆ. ಇವರ ನಿರ್ದೇಶನದ ಬಲದೊಂದಿಗೆ ಈ ಸಂಸ್ಥೆಗೆ ಸೇರಿದ ಎಲ್ಲಾ ಗುರುಗಳು ನಿಸ್ವಾರ್ಥವಾಗಿ ಜನರ ಸೇವೆಯಲ್ಲಿ ತಮ್ಮನ್ನೇ ತೊಡಗಿಸಿಕೊಂಡಿದ್ದಾರೆ. ವೈದ್ಯಕೀಯ ಶಿಬಿರಗಳು, ಜಾಗೃತಿ ಕಾರ್ಯಕ್ರಮಗಳು ಮತ್ತು ಗ್ರಾಮೀಣ ಶಿಕ್ಷಣದ ಮೂಲಕ ಸಾಮಾಜಿಕ ಉನ್ನತಿಗೆ ದುಡಿಯುವ ಅವರ ಗಮನಾರ್ಹ ಚಟುವಟಿಕೆಗಳನ್ನು ವೈಯಕ್ತಿಕವಾಗಿ ಗಮನಿಸಿದ್ದೇನೆ.

ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಜಗತ್ತು ನರಳುತ್ತಿರುವಾಗ ಈ ಸಂಸ್ಥೆಯ ಸದಸ್ಯರು ಕೊರೋನಾ ಯೋಧರಂತೆ ಜನರ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಬಡವರು ಮತ್ತು ನಿರ್ಗತಿಕರ ಅಗತ್ಯಗಳಿಗೆ ಸ್ಪಂದಿಸಲು ತಮ್ಮ ಉದಾರ ಕೈಗಳನ್ನು ಚಾಚಿದ್ದಾರೆ. ಈ ಸ್ಮರಣಿಕೆಯ ಪುಟಗಳ ಮೇಲೆ ಕಣ್ಣಾಯಿಸಿದಾಗ, ಈ ಸಂಸ್ಥೆ ಹಲವರ ಮುಖದಲ್ಲಿ ಮಂದಹಾಸ ತಂದಿರುವಂತಹ ಸತ್ಯ ನಮ್ಮ ಅರಿವಿಗೆ ಬರುತ್ತದೆ. ಬಡ ಮತ್ತು ನಿರ್ಗತಿಕ ಕುಟುಂಬಗಳಿಗೆ ಅವರು ತಂದ ಪರಿಹಾರ, ನೀಡಿದ ಸಾಂತ್ವನ ಶ್ಲಾಘನೀಯ. ಅವರ ಸ್ವ–ತ್ಯಾಗದ ಸಾಮಾಜಿಕ ಚಟುವಟಿಕೆಗಳು "ಈ ನನ್ನ ಸೋದರರಲ್ಲಿ ಒಬ್ಬನಿಗೆ ಅವನೆಷ್ಟೇ ಕನಿಷ್ಠನಾಗಿರಲಿ, ನೀವು ಹೀಗೆ ಮಾಡಿದಾಗಲೆಲ್ಲಾ ಅದನ್ನು ನನಗೇ ಮಾಡಿದಿರಿ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಎಂಬ ಯೇಸುವಿನ ಮಾತುಗಳನ್ನು ಸಾರಿ ಹೇಳುತ್ತವೆ.

ಸಹಜವಾಗಿಯೇ. ಇವೆಲ್ಲವೂ ನಮ್ಮ ಹಿತೈಷಿಗಳ ಔದಾರ್ಯದಿಂದ ಮತ್ತು ಈ ಉದಾತ್ತ ಕಾರ್ಯಕ್ಕೆ ಬೆಂಬಲವಾಗಿ ಮುಂದೆ ಬಂದ ಅನೇಕ ದಾನಿಗಳ ಸಹಕಾರದಿಂದ ಸಾಧ್ಯವಾಗಿದೆ. ಈ ಎಲ್ಲಾ ದಾನಿಗಳನ್ನು ಮನದಾಳದಿಂದ ಸ್ಮರಿಸಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಹಾಗೂ ಅವರ ಉದ್ದೇಶಗಳಿಗಾಗಿ ಪ್ರಾರ್ಥಿಸುವಂತಹ ಪ್ರಾಮಾಣಿಕ ಭರವಸೆಯನ್ನು ನೀಡುತ್ತೇನೆ.

ವಿಲಿಯಂ ಮಿರಾಂದಾ ಅವರನ್ನು ಹೊಗಳಲು ಪದಗಳು ಸಾಲವು. ಪ್ರೀತಿಯನ್ನು ಸಾರುವ ಕ್ರೈಸ್ತ ಧರ್ಮದ ತತ್ವಗಳನ್ನು ಸಾಕಾರಗೊಳಿಸುತ್ತಿರುವ ಕೀರ್ತಿ ಈ ಸಂಸ್ಥೆಯ ರುವಾರಿ ವಿಲಿಯಂ ಮಿರಾಂದಾ ಮತ್ತು ಇತರ ಗುರುಗಳಿಗೆ ಸಲ್ಲುತ್ತದೆ. ವಾಸ್ತವವಾಗಿ, ಅವರ ಸೇವಾಕಾರ್ಯಗಳು ನನ್ನ ಮಾತಿಗಿಂತ ಜೋರಾಗಿ ಮಾತನಾಡುತ್ತವೆ. ನಾನು ಈ ಸಂಸ್ಥೆಯ ಎಲ್ಲಾ ಸದಸ್ಯರಿಗೆ ಕೃತಜ್ಞನಾಗಿರುತ್ತೇನೆ ಮತ್ತು ಅವರನ್ನು ಪ್ರಾಮಾಣಿಕವಾಗಿ ಅಭಿನಂದಿಸುತ್ತೇನೆ.

"ಪ್ರೇರಣಾ" ಸಾಮಾಜಿಕ ಕೇಂದ್ರದ ಮೇಲೆ ದೇವರ ಹೇರಳವಾದ ಆಶೀರ್ವಾದವನ್ನು ಪ್ರಾರ್ಥಿಸುತ್ತಾ,

ಇತೀ ನಿಮ್ಮ



**ವಂ. ಫಾ. ಪಿಯುಸ್ ಜೇಮ್ಸ್ ಡಿಸೋಜ**
ಪ್ರಾಂತ್ಯಾಧಿಕಾರಿಗಳು, ಕರ್ನಾಟಕ–ಗೋವಾ

# Message



Dear Rev. Fr. William,

I am delighted to note that the Prerana Social Welfare Centre, the unit of Carmel Jyothi Public Charitable Trust (R), is completing another glorious year in its checkered history of service of the downtrodden from so many villages in the vicinity of Jagalur Taluka of the backward district of Davanagere in Karnataka. My hearty Congratulations to Rev. Fr. William and all those who are responsible for the growth of Prerana Social Welfare Centre.

What was begun, as a small venture has today become a huge tree spreading its branches in very many places in Karnataka, and is now giving its soothing shade and protection to so many left-out sectors of the society. I have known personally for the past many years the beginning and the growth and the contribution Prerana Social Welfare Centre has been doing for the poor and the less fortunate brethren at Jagalur. Rev. Fr. William, the Director of Prerana Welfare Centre, is walking in the footsteps of Christ Jesus who came to this world to show us the merciful face of the Heavenly Father. "Whatever you did for one of the least of these brothers/ Sisters of mine, you did it for me" (Mt. 25:40). This sentence of Jesus Christ has been realized in the life of Fr. William. He is ever ready to render his service for the upliftment of the underprivileged and marginalized. Service to humanity is service to God is the motto of Prerana Social Welfare Centre. I am glad that the small seed sown in Huvinahadagali has become a huge tree and is spreading its branches in Londa, Jagalur and now at Gulbarga.

I am happy that Prerana Social Welfare Centre, Jagaluru is a part of Carmel Jyothi Public Charitable Trust and I am glad that Rev. Fr. William is rendering his valuable time for the upliftment of the poor and the needy through various social activities like: Free eye camp, Free dental camp, Free General Health camp, Free Animal camp, Empowering the differently able, Free Tailoring Centre, Legal awareness program, Women empowerment program, Informative program for Farmers, Children etc. I thank Rev. Fr. William for his selfless service in uplifting the lives of the poor and the downtrodden. May God who called you not to be served but to serve may guide you with wisdom and knowledge so that you may continue the work of God in the years to come.

I thank all our benefactors who generously contribute their mite to our mission. Your lavish contribution has really been a wonderful support in bringing to completion many deeds of Christian love. We thank you wholeheartedly for your aid and support in carrying out the Lord's mission in varied ways. May God Bless your generosity and good will. Dear Fr. William & Community we wish you every success in all the social activities that you are undertaking in the years to come. May our Heavenly Mother, our Lady of Mount Carmel, intercede for you.

**Fr. Denzil Veigas OCD**
Director of Carmel Jyothi Public Charitable Trust
Huvinahadagali



# *Message*

**My Experience at Prerana, Social Welfare Centre, Jagalur**

Soon After my Ordination, I got my first appointment to Jagalur in the month of July 2020. On 17th of August 2020, I reached Jagalur. Being interested in the missions, I was posted in this mission field, where there are hardly two Catholic families. Initially, I, being a newly ordained, young priest, found that there was nothing to do, either inside the house itself, nor in the locality, where wasn't much ministry. At this juncture Fr. William Miranda my Superior was a great support to me especially in the Media Ministry.

Soon, I began to enjoy life in this mission, in earlier formation years, we had been too many, to receive from the formators, individual care and attention. Now, here, there were just a handful of us. But as the time passed, I was assisting Fr. William in various kinds of social work: visiting the villages, conducting eye camps, dental camps, awareness programmes and supervising over the health camps and many other programmes. Fr. William introduced me to all the important officials.

Now, this is my 2nd year in this community. Apart from prayer, Carmelites, like all Christians are called to listen to the requirements of the last judgment: *"when I was hungry; you gave me food to eat, when I was thirsty you gave me water to drink; I was in prison and you visited me."* – Matthew 25: 35. The words of our Lord Jesus Christ became true in my life and this is what I have experienced in this mission. Now, to speak about my first and best of my superiors first and foremost he has tremendous love towards the poor and the needy ones. He works tirelessly towards the downtrodden, neglected ones and more over the poor students. He helps, doing his very best. Therefore, the bible verse is very clear and very much suits Fr. William - Mt 25: 40 *"Truly I tell you, just as you did it to one of the least of these who are members of the family, you did it to me."*

Once again, I thank Fr. William for giving me the opportunity to share my experiences of the past one and half years. I am indebted to the support and encouragement of Fr. William who shown me the taste for the Social Apostolate. I will always cherish these memories till the end of my life. The first appointment to the Jagalur community is the best of my life. God bless Fr. William my superior and his future plans. Thank you.



**Fr. Sunil Dsouza OCD**
Former Asst. Director



# ಸಂದೇಶ

## ನನ್ನ ಅನುಭವ – ಪ್ರೇರಣಾ, ಸಮಾಜ ಸೇವಾ ಸಂಸ್ಥೆ, ಜಗಳೂರು

ನನ್ನ ಯಾಜಕ ದೀಕ್ಷೆಯ ನಂತರ ಮೊದಲ ನೇಮಕತ್ವ ಜುಲೈ ತಿಂಗಳಲ್ಲಿ ಆಯಿತು. ಆಗೋಸ್ತ್ ತಿಂಗಳ 17ನೇಯ ದಿನ 2020 ನಾನು ಜಗಳೂರಿಗೆ ಪಾದರ್ಪಣೆ ಮಾಡಿದೆ. ನನ್ನ ಇಶ್ಟದ ಪ್ರಕಾರ, ಸಮಾಜ ಸೇವೆಯಲ್ಲಿ ಆಸಕ್ತಿ ಇದ್ದರಿಂದ, ಈ ಅವಕಾಶ ಲಭಿಸಿತು. ಆರಂಭದಲ್ಲಿ ಸ್ವಲ್ಪ ಬೇಸರ, ಮನಸ್ಸಿಗೆ ಆಶಾಂತಿ ಕೇವಲ ಏರಡೇ ಏರಡು ಕ್ರಿಸ್ಚಿಯನ್ ಕುಟುಂಬಗಳು, ಸ್ವಲ್ಪ ಬೇಸರ ತಂದಿತು. ಕಾಲಕ್ರಮೇಣ ವಂದನೀಯ ಸ್ವಾಮಿ. ವಿಲಿಯಂ ಮಿರಾಂದರವರು ನನಗೆ ನೀಡಿದ ಪ್ರೋತ್ಸಾಹ, ಪ್ರತೇಕವಾಗಿ ನನ್ನ ಯು ಟುಬ್ ಕಾರ್ಮೆಲ್ ಶೈನ್ ವಾಹಿಣಿಗೆ ತುಂಬಾ ಸಹಾಯಹಸ್ತ ನೀಡಿದರು. ನಾನು ಅನೇಕ ಚಟುವಟಿಕೆಗಳಲ್ಲಿ ಪಾತ್ರ ವಹಿಸುತ್ತಿದ್ದೆ. ಉದಾಹರಣೆಗೆ: ಹಳ್ಳಿಗಳಿಗೆ ಭೇಟಿ ನೀಡುವುದು, ಕಣ್ಣಿನ ಶಸ್ತ್ರ ಚಿಕಿತ್ಸೆ, ದಂತ ತಪಾಸಣೆ ಹಾಗೂ ಇನ್ನಿತರ ಹಲವಾರು ಕಾರ್ಯಕ್ರಮಗಳಲ್ಲಿ ಪಾತ್ರವನ್ನು ವಹಿಸುತ್ತಿದ್ದೆ. ವಂದನೀಯ ಸ್ವಾಮಿ. ವಿಲಿಯಂ ಮಿರಾಂದರವರು ನನ್ನ ಪರಿಚಯವನ್ನು ಹಲವಾರು ಗಣ್ಯ ವ್ಯಕ್ತಿಗಳಿಗೆ ಮಾಡಿ ಕೊಟ್ಟಿದ್ದಾರೆ.

ನನ್ನ ಎರಡನೇಯ ವರ್ಷದ ಆನಂದವನ್ನು ಈ ಸಮಾಜ ಸೇವೆಯಲ್ಲಿ ನಾನು ಪಡುತ್ತಿದ್ದೇನೆ. ಬಡವರ, ದೀನ ದಲಿತರ, ಬಡ ವಿಧ್ಯಾರ್ಥಿಗಳ ಸೇವೆಯಲ್ಲಿ ಮುಡುಪಾಗಿಟ್ಟಿರುವ ನನಗೆ ಎಲ್ಲಿರದ ಸಂತೋಷ, ಆನಂದ ಹಾಗೂ ಜೀವನದಲ್ಲಿ ತೃಪ್ತಿ ನನಗೆ ಸಿಗುತ್ತದೆ. ಪ್ರಭು ಕ್ರಿಸ್ತರು ನುಡಿಯುವ ಪ್ರಕಾರ "*ನಾನು ಹಸಿದಿದ್ದೆ, ನನಗೆ ಆಹಾರ ಕೊಟ್ಟಿರಿ; ಬಾಯಾರಿದ್ದೆ, ಕುಡಿಯಲು ಕೊಟ್ಟಿರಿ; ಬಟ್ಟೆಬರೆಯಿಲ್ಲದೆ ಇದ್ದೆ, ನನಗೆ ಉಡಲು ಕೊಟ್ಟಿರಿ; ಬಂಧಿಯಾಗಿದ್ದೆ, ನೀವು ನನ್ನನ್ನು ಸಂಧಿಸಿದಿರಿ.*" – ಸಂತ ಮತ್ತಾಯ 25:25. ಇಂತಹ ಪ್ರಭು ಯೇಸು ಕ್ರಿಸ್ತರ ವಾಕ್ಯಗಳು ನನ್ನ ಜೀವನದಲ್ಲಿ ಅರ್ಥ ಗರ್ಭಿತವಾಗಿದೆ. ಇದಕ್ಕೆಲ್ಲಾ ಕಾರಣ ಕರ್ತರು ವಂದನೀಯ ಸ್ವಾಮಿ. ವಿಲಿಯಂ ಮಿರಾಂದರವರು.

ಇವರ ಸರಳತೆಯ ಜೀವನ ಹಾಗೂ ಬಡ ಜನತೆಗೆ ತೋರಿಸುವ ಪ್ರೀತಿ, ಮಮತೆ ನನ್ನ ಸಮಾಜ ಸೇವೆಯಲ್ಲಿ ಇವರು ಹಾಕಿರುವ ಭದ್ರ ಬುನಾದಿಯಾಗಿದೆ. ಪ್ರಭು ಕ್ರಿಸ್ತರು ಆಡುವ ಮಾತು, ಸಂತ ಮತ್ತಾಯ 25:40 "*ಈ ನನ್ನ ಸೋದರರಲ್ಲಿ ಒಬ್ಬನಿಗೆ, ಅವನೆಶ್ಟೇ ಕನಿಶ್ಟನಾಗಿರಲಿ, ನೀವು ಸಹಾಯ ಮಾಡಿದಾಗಲೆಲ್ಲಾ ಅದನ್ನು ನನಗೇ ಮಾಡಿದಿರಿ, ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ*" ಈ ವಾಕ್ಯ ವಂದನೀಯಾ ಸ್ವಾಮಿ. ವಿಲಿಯಂ ಮಿರಾಂದರವರಿಗೆ ಬಹು ಸರಿಸಾಟಿಯಾಗಿದೆ. ಇಂತಹ ಬಹು ಸುಂದರವಾದ ವ್ಯಕ್ತಿತ್ವ ಸ್ವಾಮಿ. ವಿಲಿಯಂನವರದು.

ನನ್ನ ಸವಿನುಡಿಯನ್ನು ಮುಕ್ತಾಯ ಪಡಿಸುವ ಮೊದಲು, ನನ್ನ ಅನಿಸಿಕೆಯನ್ನು ವ್ಯಕ್ತ ಪಡಿಸಲು ಅವಕಾಶ ನೀಡಿದ ಸ್ವಾಮಿ. ವಿಲಿಯಂ ನಿಮಗೆ ಧನ್ಯವಾದಗಳು. ಸಮಾಜ ಸೇವೆಯಲ್ಲಿ ನನಗೆ ನೀಡಿದ ಅಭಿರುಚಿಗೆ ನಾನು ಅಭಾರಿಯಾಗಿದ್ದೇನೆ. ನಿಮ್ಮ ಸಮಾಜ ಸೇವೆ ಮುಂದುವರಿಸಲು ದೇವರು ನಿಮಗೆ ಶಕ್ತಿ, ಆರೋಗ್ಯ ದಯಪಾಲಿಸಲಿ ಎಂದು ಆಶಿಸುತ್ತಾ ನನ್ನ ಮಾತುಗಳಿಗೆ ವಿರಾಮ ನೀಡುತ್ತೇನೆ.

ವಂದನೀಯಾ ಸ್ವಾಮಿ. ಸುನೀಲ್ ಡಿ'ಸೋಜ ಒಸಿಡಿ
ಮಾಜಿ ಸಹ ನಿರ್ದೇಶಕರು

ಎಸ್. ವಿ. ರಾಮಚಂದ್ರ
ಶಾಸಕರು, ಜಗಳೂರು ವಿಧಾನಸಭಾ ಕ್ಷೇತ್ರ
ಮೊಬೈಲ್ ನಂ. 9844064989, 9902069489
ಅಧ್ಯಕ್ಷರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)



# ಸಂದೇಶ

ಜಗಳೂರು ಪಟ್ಟಣದ ದಾವಣಗೆರೆ ರಸ್ತೆಯಲ್ಲಿರುವ ಪ್ರೇರಣ ಸಮಾಜ ಸೇವಾ ಸಂಸ್ಥೆ ಕಳೆದ ಸಾಲಿನ (2020–2021) ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ಬಹಳ ಸಂತೋಷ. ಪ್ರೇರಣ ಸಮಾಜ ಸೇವಾ ಸಂಸ್ಥೆಯು ಅನೇಕ ಜನಪರ ಕೆಲಸಗಳನ್ನು ಮಾಡುತ್ತಾ ಇದೆ. ಫಾ. ವಿಲಿಯಂ ಮಿರಾಂದರವರು ಬಂದ ನಂತರ ಪ್ರೇರಣ ಸಮಾಜ ಸೇವಾ ಸಂಸ್ಥೆ ತಾಲ್ಲೂಕಿನಾದ್ಯಂತ ಹೆಸರನ್ನುಗಳಿಸಿದೆ. ಆರೋಗ್ಯ ಶಿಬಿರಗಳು. ಮಹಿಳೆಯರಿಗೆ ಟೈಲರಿಂಗ್ ತರಬೇತಿಗಳು, ಜನಜಾಗೃತಿ ಮೂಡಿಸುವ ಅರಿವು ಕಾರ್ಯಕ್ರಮಗಳು, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯ, ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ಅನೇಕ ಹಿರಿಯ ನಾಗರಿಕರಿಗೆ ಅನುಕೂಲ ಮಾಡುವ ಮೂಲಕ ಪ್ರೇರಣ ಸಮಾಜ ಸೇವಾ ಸಂಸ್ಥೆಯು ಎಲ್ಲರಲ್ಲಿಯೂ ಮನೆಮಾತಾಗಿದೆ. ಕೋವಿಡ್–19 ಲಾಕ್ ಡೌನ್ ಆದ ಸಂದರ್ಭದಲ್ಲಿ ಅನೇಕ ಜನರಿಗೆ ಆಹಾರದ ಕಿಟ್ ವಿತರಣೆ ಮಾಡಿ ಹಸಿವು ನೀಗಿಸಿದ್ದಾರೆ.

ನಾನು ಈ ಸಂಸ್ಥೆ ಆಯೋಜಿಸಿದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಅಲ್ಲದೆ ಸಂಸ್ಥೆಯ ಒಳಭಾಗದಲ್ಲಿ ಸಿ.ಸಿ. ರಸ್ತೆಯನ್ನು ಮಾಡಿಸಿ ಕೊಟ್ಟಿದ್ದೇನೆ. ಪ್ರೇರಣ ಸಮಾಜ ಸೇವ ಸಂಸ್ಥೆ ಮಾಡುತ್ತಿರುವ ಸೇವಾ ಕಾರ್ಯಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಡವರಿಗೆ, ನಿರ್ಗತಿಕರಿಗೆ, ಅಸಹಾಯಕತೆಯಲ್ಲಿ ಇರುವವರಿಗೆ ಅನುಕೂಲ ಮಾಡುವಂತಾಗಲಿ ಎಂದು ಹಾರೈಸುತ್ತೇನೆ.

**ಶ್ರೀ ಎಸ್.ವಿ ರಾಮಚಂದ್ರ**
ಮಾನ್ಯ ಶಾಸಕರು, ಜಗಳೂರು ವಿಧಾನ ಸಭಾ ಕ್ಷೇತ್ರ
ಹಾಗೂ ಅಧ್ಯಕ್ಷರು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ಶಾಸಕರ ಭವನ ಕೊಠಡಿ ಸಂಖ್ಯೆ: 235-236, ಶಾಸಕರ ಭವನ-2, ಬೆಂಗಳೂರು-560 001.
ಜಗಳೂರು ವಿಳಾಸ : "ಶ್ರೀ ಗಾಣಗಟ್ಟೆ ಮಾಯಮ್ಮ ನಿಲಯ", ಲಕ್ಷಮ್ಮ ಶಾಲೆ ಪಕ್ಕ, ಜೆ.ಸಿ.ಆರ್. ಬಡಾವಣೆ, ಜಗಳೂರು-577528
ದಾವಣಗೆರೆ ವಿಳಾಸ : ನಂ. 354, "ನಂದಿನಿ" ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ-577002. ದೂರವಾಣಿ: 08192-256120
ಇ-ಮೇಲ್: chairmankmvstdcl85@gmail.com
ಕಛೇರಿ : 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ಬೆಂಗಳೂರು-560052 ದೂರವಾಣಿ : 080-22250017, 22250018 ಫ್ಯಾಕ್ಸ್ : 080-22250051 ಇ-ಮೇಲ್ : mdkstdevp@yahoo.co.in

ಎಸ್. ವಿ. ರಾಮಚಂದ್ರ
ಶಾಸಕರು, ಜಗಳೂರು ವಿಧಾನಸಭಾ ಕ್ಷೇತ್ರ
ಮೊಬೈಲ್ ನಂ. 9844064989, 9902069489
ಅಧ್ಯಕ್ಷರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)



# Message

Rev Fr William Miranda
Director, Prerana Social Work Centre, Jagalur

It is with great joy I came to learn that Prerana Social Work Centre, will be releasing the annual (2020-2021) souvenir. Prerana Social Work Centre has been conducting several humanitarian activities. After the arrival of Fr William Miranda Prerana Social Work Centre has earned a name for herself. Through the programmes like heath camps, Tailoring classes for women, social awareness programmes, educational support for the poor children, eye check-up camps and cataract operations, various schemes for the senior citizens, 'Prerana Social Work Centre' has become a household name. During the Covid19 pandemic, they have satisfied the hungry through food kits.

I have been part of several programmes conducted by the centre. I have also provided the centre with a concrete access road. I wish that Prerana Social Work Centre conducts many more socially concerned programmes and assist the poor and downtrodden in society.

**Sri S V Ramachandra**
President of Karnataka Maharshi Valmiki SC.ST. Development Department
Bangalore

ಶಾಸಕರ ಭವನ ಕೊಠಡಿ ಸಂಖ್ಯೆ: 235-236, ಶಾಸಕರ ಭವನ-2, ಬೆಂಗಳೂರು-560 001.
ಜಗಳೂರು ವಿಳಾಸ : "ಶ್ರೀ ಗಾಣಗಟ್ಟೆ ಮಾಯಮ್ಮ ನಿಲಯ", ಲಕ್ಷಮ್ಮ ಶಾಲೆ ಪಕ್ಕ, ಜೆ.ಸಿ.ಆರ್. ಬಡಾವಣೆ, ಜಗಳೂರು-577528
ದಾವಣಗೆರೆ ವಿಳಾಸ : ನಂ. 354, "ನಂದಿನಿ" ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ-577002. ದೂರವಾಣಿ: 08192-256120
ಇ-ಮೇಲ್: chairmankmvstdcl85@gmail.com
ಕಛೇರಿ : 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ಬೆಂಗಳೂರು-560052 ದೂರವಾಣಿ : 080-22250017, 22250018 ಫ್ಯಾಕ್ಸ್ : 080-22250051 ಇ-ಮೇಲ್ : mdkstdevp@yahoo.co.in



# ಸಂದೇಶ


ಡಾ. ಅರವಿಂದನ್.ಪಿ.ಎಸ್
ಆರ್.ಪಿ.ರಸ್ತೆ,
ಜಗಳೂರು 577528

ಸದಸ್ಯರು
ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ
(ಸಮಾಜ ಕಲ್ಯಾಣ ಇಲಾಖೆ)


---

ವಂದನೀಯ ಫಾದರ್ ವಿಲಿಯಂ ಮಿರಾಂದರವರಿಗೆ ಹೃದಯ ಪೂರ್ವಕ ಅಭಿನದನೆಗಳು ಈ ಅಭಿನಂದನೆಗೆ ತಮ್ಮ ಅಪೂರ್ವ ಸಾರಂಶಗಳನ್ನು ನೆನಪಿಸುತ್ತೇನೆ.


******

- ಯೋಗಾಸನದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಆವರಣದಲ್ಲಿ ದೊಡ್ಡ ಕಾರ್ಯಕ್ರಮ
- ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ನೊಂದ ಎಲ್ಲಾ ಸಮಾಜವನ್ನು ಗುರುತಿಸಿ ತಮ್ಮ ಕೈಲಾದ ಸೇವೆ ಮಾಡಿರುತ್ತಾರೆ.
- ಕೊರೋನ ಸಂದರ್ಭದಲ್ಲಿ ಖಾಸಗಿ ಶಾಲಾ ಶಿಕ್ಷಕರಿಗೆ ಆಹಾರದ ಕಿಟ್ ವಿತರಣೆ ಮಾಡಿದ್ದು.
- ಕೂಲಿ ಕಾರ್ಮಿಕರು, ಮತ್ತು ಪೌರಕಾರ್ಮಿಕರು, ಪತ್ರಿಕ ವರದಿಗಾರರಿಗೆ ಆರ್ಥಿಕವಾಗಿ ಸಹಾಯ ಮಾಡಿರುತ್ತಾರೆ.
- ವೈದ್ಯಕೀಯವಾಗಿ ಪ್ರತಿ ವರ್ಷವು ನೊಂದು ಬೆಂದ ಬಡವರಿಗೆ ಕಣ್ಣಿನ ತಪಾಸಣೆಯ ಕ್ಯಾಂಪಿನಿಂದ ಸಾವಿರಾರು ಜನರಿಗೆ ಪುನಃ ಬೆಳಕಿನ ಆರೋಗ್ಯದ ಸಹಾಯ ನೀಡಿರುತ್ತಾರೆ.
- ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಎಲ್ಲಾ ಶಾಲೆಗಳಲ್ಲಿಯು ಆರ್ಥಿಕ ಸಹಾಯ ನೀಡಿರುತ್ತಾರೆ.
- ವಿಲಿಯಂ ಮಿರಾಂದರವರು ಬಂದ ಮೇಲೆ ಜಗಳೂರಿನ ಪ್ರೇರಣ ಸಮಾಜ ಸೇವಾ ಸಂಸ್ಥೆಯು ಜಿಲ್ಲೆಯಾದ್ಯಂತ ಪ್ರಚಲಿತದಲ್ಲಿದೆ, ಪರಿಚಯದಲ್ಲಿದೆ.
- ತಾಲ್ಲೂಕು/ ಜಿಲ್ಲೆಯಲ್ಲಿಯು ಎಲ್ಲಾ ಸ್ವ ಸಹಾಯ ಸಂಘಗಳೊಂದಿಗೆ ಒಡನಾಟದಲ್ಲಿಯು ತಮ್ಮ ಕಾರ್ಯ ವೈಖರಿಯ ಕೊಂಡಾಡುತ್ತಿದ್ದಾರೆ.

ಮರಕ್ಕೆ ಬಳ್ಳಿಯ ಆಸರೆಯಾಗಿ
ಮನಕ್ಕೆ ಹೃದಯ ಆನಂದವಾಗಿ
ನೊಂದ ಜೀವಗಳಿಗೆ ಪ್ರೇರಣ ಸಮಾಜ
ಜೀವಂತ ಆಸರೆಯಾಗಿ ಎಲ್ಲರ
ತನು ಮನಗಳನ್ನು ಗೆದ್ದು
ಅಧರ್ಮದ ಕೆಸರಲ್ಲಿ

ಧರ್ಮದ ಕಮಲ ಅರಳಿದಾಗ ಫಾದರ್ ವಿಲಿಯಂ ಸರ್ ಶಾಶ್ವತವಾದ ಸಮಾಜದ ಕಣ್ಣು ಎಂದು ಕಂಡಿದ್ದಾರೆ" ಆದ್ದರಿಂದ ತಮಗೆ ತಮ್ಮ ಪ್ರೇರಣ ಸಮಾಜದ ಎಲ್ಲಾ ಗೌರವಾನ್ವಿತರಿಗೆ ನಿಮ್ಮ ಅರವಿಂದನ್ ಹಾಗೂ ನನ್ನ ಸಂಸ್ಥೆಯ ಪುಟಾಣಿಗಳಿಂದ ಹಾಗೂ ಶಿಕ್ಷಕ ವೃಂದದ ಪರವಾಗಿ ಅನಂತ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಮಾಜದಲ್ಲಿ ಎಲ್ಲಾ ಧರ್ಮಗಳ ಜನರೊಂದಿಗೆ
ನಗು ಮುಖದ ಸ್ನೇಹದೊಂದಿಗೆ
ಕಾಣದ ಕೈಗಳ ಸಹಾಯದೊಂದಿಗೆ
ಬಡತನದ ಶ್ರೀಮಂತಿಕೆಯ ಮನದೊಂದಿಗೆ
ಎಲ್ಲಿಯೂ ನಿಷ್ಠೂರತೆಗೆ ಒಳಗಾಗದೆ
ಎಲ್ಲರ ಮನಗೆದ್ದ ಫಾದರ್ ವಿಲಿಯಂ ಸರ್
ಮುಂದಿನ ಸಾಧನೆ ಹೆಜ್ಜೆಗಳು ಈ ನಾಡಿಗೆ ತಲುಪಲಿ
ಎನ್ನುವ ನನ್ನ ಬಯಕೆ.



**ಡಾ|| ಪಿ.ಎಸ್. ಅರವಿಂದನ್**

# ಸಂದೇಶ

॥ ಓಂ ಶ್ರೀ ಮಂಜುನಾಥಾಯ ನಮಃ ॥

**ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ (ರಿ.)**

**ಧಾರವಾಡ ಪ್ರಾದೇಶಿಕ ಕಛೇರಿ**

**ಫ್ಲಾಟ್ ನಂ. 13, ಕೈಗಾರಿಕಾ ಪ್ರದೇಶ, ರಾಯಾಪುರ, ಹುಬ್ಬಳ್ಳಿ – ಧಾರವಾಡ – 580 009**

ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು
ಅಧ್ಯಕ್ಷರು

**ಶಾಶ್ವತ ಅಭಿವೃದ್ಧಿಗಾಗಿ ಸಮಗ್ರ ಯೋಜನೆ**

Ph. : 0836 - 2970781
E-mail : skdrdprd@gmail.com

ರಿಗೆ,
ಫಾ. ವಿಲಿಯಂ ಮಿರಾಂದ
ನಿರ್ದೇಶಕರು
ಪ್ರೇರಣ ಸಮಾಜ ಸೇವಾ ಸಂಸ್ಥೆ, ಜಗಳೂರು.



ಮಾನ್ಯರೇ.

"ಪ್ರೇರಣ ಸಮಾಜ ಸೇವಾ ಸಂಸ್ಥೆ ಕಳೆದ ಅನೇಕ ವರ್ಷಗಳಿಂದ ವಿವಿಧ ರೀತಿಯ ಸಮಾಜದ ಅಭಿವೃದ್ಧಿಗಾಗಿ ಕಾರ್ಯೋನ್ಮುಖಗೊಂಡಿರುವ ಈ ಸಂಸ್ಥೆಯು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಕರ್ತವ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ.

ಮನೆ ದುರಸ್ತಿ, ಉಚಿತ ಹೊಲಿಗೆ ಯಂತ್ರ, ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಇನ್ನೂ ಹಲವಾರು ರೀತಿಯಲ್ಲಿ ಸಹಾಯ ಹಸ್ತ ನೀಡಿ ಕತ್ತಲು ತುಂಬಿದ ನೂರಾರು ಕುಟುಂಬಗಳಿಗೆ ಬೆಳಕು ಚೆಲ್ಲುವುದರ ಮುಖಾಂತರ ಸಮಾಜಕ್ಕೆ ಮಾದರಿಯಾದ ಸೇವಾ ಸಂಸ್ಥೆ ಎಂದರೆ ಪ್ರೇರಣ ಸಮಾಜ ಸೇವಾ ಸಂಸ್ಥೆಯಾಗಿದೆ.

ಈ ಮೂಲಕ ಸಂಸ್ಥೆಯು ಇನ್ನೂ ಹೆಚ್ಚಿನ ಸಮಾಜದ ಅಭಿವೃದ್ಧಿಯನ್ನು ಅವರ ಪಥದಲ್ಲಿ ಸಾಗಿ ಅಸಹಾಯಕರಿಗೆ ಆತ್ಮಸ್ಥೈರ್ಯ ದಿಂದ ಜೀವನ ಸಾಗಿಸಲು ನಿರಂತರ ಸಹಕಾರ ನೀಡಲಿ. ಈ ಮಹತ್ವವಾದ ಸೇವೆಯಿಂದ ಸಾವಿರಾರು ಕುಟುಂಬಗಳಿಗೆ ಸದಾ ದಾರಿದೀಪವಾಗಿ ಸಮಾಜದ ಅಭಿಮುಖವಾಗಿ ಕೈಂಕರ್ಯಗಳಿಗೆ ಕೈ ಜೋಡಿಸಲಿ. ಪ್ರೇರಣ ಸಮಾಜ ಸೇವಾ ಸಂಸ್ಥೆಯ ಸೇವೆ ನಿರಂತರವಾಗಿರಲಿ ಎಂದು ಹಾರೈಸುತ್ತೇನೆ."

ವಂದನೆಗಳೊಂದಿಗೆ

ಇಂತಿ,

ಸ್ಥಳ: ಧಾರವಾಡ
ದಿನಾಂಕ: 25–03–2021

ದುರ್ಗೇಗೌಡ
ಪ್ರಾದೇಶಿಕ ನಿರ್ದೇಶಕರು
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ದಿ ಯೋಜನೆ
ಬಿ.ಸಿ.ಟ್ರಸ್ಟ್ (ರಿ)
ಪ್ರಾದೇಶಿಕ ಕಛೇರಿ ಧಾರವಾಡ

॥ ಓಂ ಶ್ರೀ ಮಂಜುನಾಥಾಯ ನಮಃ ॥

**ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ (ರಿ.)**

ಧಾರವಾಡ ಪ್ರಾದೇಶಿಕ ಕಛೇರಿ

ಫ್ಲಾಟ್ ನಂ. 13, ಕೈಗಾರಿಕಾ ಪ್ರದೇಶ, ರಾಯಾಪುರ, ಹುಬ್ಬಳ್ಳಿ – ಧಾರವಾಡ – 580 009

ಶಾಶ್ವತ ಅಭಿವೃದ್ಧಿಗಾಗಿ ಸಮಗ್ರ ಯೋಜನೆ

ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು
ಅಧ್ಯಕ್ಷರು

Ph. : 0836 - 2970781
E-mail : skdrdprd@gmail.com



# *Message*

Prerana, Social Work Centre, for the past several years has been involved with various social Uplifghtment programs. Keeping in mind the social, economic and educational needs of the people it conducts various programs which need to be highly appreciated.

Through house renovation, free distribution of sewing machines and free eye camps Prerana Social Work Centre has been illuminating the lives of families, thus becoming a role model for others.

We wish every success to the Prerana Social Work Centre so that it may continue to help many other needy people in society. May it endure to illumine the lives of many in the days to come. I wish every success to Prerana Social Work Centre.

Greetings

Sincerely

Place: Dharwad
Date: 25-03-2021

**Duggegowda**
Regional Director
Sri Darmastala Rural Development Programme
B.C. Trust®
Regional Office, Dharwad

AYUSH
WELLNESS SPA

ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ

[ಕರ್ನಾಟಕ ಸರ್ಕಾರ ಮತ್ತು ಶಾಂತಿವನ ಟ್ರಸ್ಟ್ (ರಿ.)]

# GOVERNMENT YOGA & NATURE CURE CENTER

**Managed by Government of Karnataka & Shanthivana Trust (R)**

**ಜಗಳೂರು-577528, ದಾವಣಗೆರೆ ಜಿಲ್ಲೆ**



# *Message*

Jagalur is a small town in davangere district. It is on the path of growth and development. Prerana Social welfare center, church, Jagalur has been contributing to the society's growth in various ways. Especially socioeconomic, education, self employment trainings and health programs. Programes like free eye checkup, free cataract operations, economic support to needy Students for education purpose, tailoring equipment. During pandemic situation Prerana Social welfare center very actively contributed to the society providing food ration kits to the needy, free masks and Sanitizer, and various other health awareness programs.

I also had opportunity to work with the Prerana Social welfare center for various programs like yoga programs and garbhsanskar program for the people of Jagalur. The programs were well organized and very much useful to the people of Jagalur. I Congratulate and wish them all the best.

**Dr. Shwetha S. Belagali**
Govt Medical Officer of Naturopathy & Yoga, Jagalur

"ಸಿರಿಗನ್ನಡಂ ಗೆಲ್ಗೆ"

# ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್

**ಜಗಳೂರು-೫೭೭ ೫೨೮, ದಾವಣಗೆರೆ ಜಿಲ್ಲೆ**

ಮಹಾ ಪೋಷಕರು : **ಜೆ.ಕೆ. ಹುಸೇನ್ ಮಿಯಾಸಾಬ್** ಗೌರವಾಧ್ಯಕ್ಷರು : **ಜೆ.ಎನ್. ಶಿವನಗೌಡ**

**ಮೊ : ೯೯೭೪ ೭೫೭೭೩** **ಮೊ : ೯೯೮೦೧ ೩೩೮೩೩**



# ಸಂದೇಶ

ಜಗಳೂರು ನಗರದಲ್ಲಿರುವ "ಪ್ರೇರಣ" ಸಂಸ್ಥೆಯು ಅಲ್ಪಸಂಖ್ಯಾತರ ಸಂಸ್ಥೆಯಾಗಿ ನಗರದಲ್ಲಿ ಸಾರ್ವಜನಿಕ ಸೇವೆ ಸಲ್ಲಿಸುತ್ತಾ ಬರುತ್ತಿರುವುದು ತುಂಬಾ ಶ್ಲಾಘನೀಯ.

ದೇಶದಲ್ಲಿ ಕ್ರಿಶ್ಚಿಯನ್ ಸಂಸ್ಥೆಗಳು ಆರೋಗ್ಯ, ಶಿಕ್ಷಣ, ಸಮಾಜ ಸೇವೆ, ಧಾರ್ಮಿಕ ಸೇವೆ, ಮಾಡುತ್ತಿರುವ ಸೇವೆಯನ್ನು ಪ್ರೇರಣ ಸಮಾಜ ಸೇವಾ ಸಂಸ್ಥೆಯು ಮುಂದುವರೆಸಿದ್ದು, ಪ್ರೇರಣ ಸಮಾಜ ಸೇವಾ ಸಂಸ್ಥೆಗೆ ನಿರ್ದೇಶಕರಾಗಿ ಈಚೆಗೆ 4 ವರ್ಷಗಳ ಹಿಂದೆ ಆಗಮಿಸಿದ ಫಾದರ್ ವಿಲಿಯಂ ಮಿರಾಂದ ಇವರು ಸಂಸ್ಥೆಯ ವತಿಯಿಂದ, ತುಳಿತಕ್ಕೊಳಗಾದ, ದೀನ ದಲಿತ ಸಾರ್ವಜನಿಕರಿಗೆ ನ್ಯಾಯ ದೊರಕಿಸಿ ಕೊಡುವ ಮೂಲಕ ಮುಖ್ಯ ವಾಹಿನಿಗೆ ತಂದು, ಇವರಿಗೆ ಶಿಕ್ಷಣ, ಆರೋಗ್ಯ ಸೇವೆಯನ್ನು ನೀಡುತ್ತಾ ಬರುವುದಲ್ಲದೇ ಸಂಸ್ಥೆಯ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆಯನ್ನು ನೀಡುತ್ತಾ ಬರುತ್ತಿರುವುದು ಹಿಂದುಳಿದ ಬರ ಪೀಡಿತ ತಾಲ್ಲೂಕಿನ ಆಶಾಕಿರಣವಾದ ಸಂಸ್ಥೆಯ ವತಿಯಿಂದ 2020–2021 ನೇ ಸಾಲಿನಲ್ಲಿ ಸಂಭವಿಸಿದ ಕರೋನ ಮಹಾ ಮಾರಿಯಿಂದ ತೊಂದರೆಗೆ ಒಳಗಾದ ಬಡ ಜನತೆಗೆ ಉಚಿತ ಆಹಾರ ಸಾಮಗ್ರಿಗಳ ಪೊಟ್ಟಣ, ಉಚಿತ ಮುಖಗವಸು, ಒದಗಿಸುವುದಲ್ಲದೇ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧನ ಸಹಾಯ ನೀಡಿ, ಬಡ ಮಹಿಳೆಗೆ ಉಚಿತ ಹೊಲಿಗೆ ಯಂತ್ರ ನೀಡುವುದು ಉತ್ತಮ ಸೇವೆಯಾಗಿರುತ್ತದೆ.

ಕ್ರಿಶ್ಚಿಯನ್ ಸಂಸ್ಥೆಯ ವತಿಯಿಂದ ಈ ಹಿಂದಿನಿಂದಲೂ ಆರೋಗ್ಯ ಸೇವೆಯಲ್ಲಿ ಶುಶ್ರೂಷಾಕರಾಗಿ ಮಹಿಳೆಯರು ತೊಡಗಿಸಿಕೊಂಡಿದ್ದು, ಬೇರೆ ಸಮಾಜಕ್ಕೆ ಮಾದರಿಯಾಗಿದ್ದು, ಎಲ್ಲದಕ್ಕೂ ಮಾದರಿಯಾಗಿರುವ "ಮದರ್ ತೆರೇಸಾ" ಇವರ ಆಶಯದಂತೆ 'ಮಾತನಾಡುವ ತುಟಿಗಳಿಗಿಂತ ಸೇವೆ ಮಾಡುವ ಕೈಗಳು ಲೇಸು' ಎಂದಿರುವ ದ್ಯೇಯದಂತೆ ತಮ್ಮ ಸಂಸ್ಥೆ ಇನ್ನೂ ಹೆಚ್ಚಿನ ಜನಪರ ಸೇವೆಯನ್ನು ಮಾಡಲಿ ಎಂಬ ಆಶಯ ನಮ್ಮದು.

**ಜಿ. ಹೆಚ್. ಹಜರತ್ ಅಲಿ**
ಅಧ್ಯಕ್ಷರು.
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು.
ಜಗಳೂರು

ಸ್ನೇಹಕ್ಕೂ ಬದ್ಧ ಸಮರಕ್ಕೂ ಸಿದ್ಧ

**ಕರುನಾಡ ರಕ್ಷಣಾ ಪಡೆ (ನೋಂ.)**

(ಕನ್ನಡ ಪರ ಸಂಘಟನೆಗಳ ಒಕ್ಕೂಟ)

ರೈತ ಸೈನಿಕರಿಗೆ ನಮನ ಜನ್ಮಭೂಮಿಗಾಗಿ ಈ ಜೀವನ

ಪ್ರಧಾನ ಕಛೇರಿ : ನಂ.37, 3ನೇ ಕ್ರಾಸ್, ಹೊಸ ಪೂಜಾರಿ ಗೋಡನ್, ಓಂ ಶಕ್ತಿ ದೇವಸ್ಥಾನದ ರಸ್ತೆ, ಸಂಜೀವಿನಿನಗರ, ಹೆಗ್ಗನಹಳ್ಳಿ, ಬೆಂಗಳೂರು -560091.

ದೂರವಾಣಿ : 9663823652 / 9449979232 ಇಮೇಲ್ : karunadarakshanapade@gmail.com






ಮೋಹನ್ ಕುಮಾರ್ .ಕೆ
ಸಂಸ್ಥಾಪಕ ಅಧ್ಯಕ್ಷರು



ಮಂಜುನಾಥ್ ಎಲ್.ವಿ.
ರಾಜ್ಯಾಧ್ಯಕ್ಷರು

# ಸಂದೇಶ

ಪರರ ಸೇವೆಯೇ ಪರಮಾತ್ಮನ ಸೇವೆ", ಎಂಬ ನಾನುಡಿಯಂತೆ ಜಗಳೂರು ತಾಲ್ಲೂಕಿನ ಜನರ ನಿಸ್ವಾರ್ಥ ಹಾಗೂ ನಿರಂತರ ಸೇವೆಯನ್ನು ಮಾಡುತ್ತಿರುವ ಸಂಸ್ಥೆ "ಪ್ರೇರಣೆ ಸಮಾಜ ಸೇವಾ ಸಂಸ್ಥೆ ಅಂದರೆ ತಪ್ಪಾಗಲಾರದು. ಫಾದರ್ ವಿಲಿಯಂ ಮಿರಾಂದರವರು ಜಗಳೂರಿಗೆ ಬಂದ ನಂತರ ಸಾರ್ವಜನಿಕರೊಡಗೂಡಿ ಎಲ್ಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ನಾಲ್ಕು ವರ್ಷಗಳಲ್ಲಿ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಚಿರಪರಿಚಿತರಾಗಿದ್ದಾರೆ

ಕಳೆದ ವರ್ಷದ ಅಂದರೆ 01-04-2020 ರಿಂದ 31-03-2021 ರಲ್ಲಿ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಎಲ್ಲಾ ಸಮಾಜ ಸೇವಾ ಕಾರ್ಯಗಳ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ಸಂತೋಷದ ಸಂಗತಿ. ಅನೇಕ ಬಡ ಮಕ್ಕಳಿಗೆ ವಿದ್ಯಾದಾನ, ಕಡು ಬಡವರಿಗೆ ಬಟ್ಟೆ ದಾನ, ಅನಾರೋಗ್ಯದಿಂದ ಇರುವವರಿಗೆ ಆರೋಗ್ಯ ದಾನ, ಕಣ್ಣಿನ ಪೊರೆ ಬಂದು ದೃಷ್ಟಿಮಂದ ಆದವರಿಗೆ ದೃಷ್ಟಿ ದಾನ, ನಿರುದ್ಯೋಗದಲ್ಲಿ ಇದ್ದವರಿಗೆ ಟೈಲರಿಂಗ್ ತರಬೇತಿ ನೀಡಿ ಉದ್ಯೋಗ ದಾನ, ವಿಧವೆ ಹಾಗೂ ಕಿವಿ, ಬಾಯಿ ಬಾರದ ಮಹಿಳೆಗೆ ಹೊಲಿಗೆ ಯಂತ್ರ ದಾನ, ಕೋವಿಡ- 19 ಮಾರಕ ರೋಗದ ಸಮಯದಲ್ಲಿ ಲಾಕ್ ಡೌನ್ ಆದಾಗ ಕೆಲಸ ಇಲ್ಲದೆ ಊಟಕ್ಕೆ ಪರದಾಡುವ ಸಂದರ್ಭದಲ್ಲಿ 800ಕ್ಕೂ ಹೆಚ್ಚು ಕುಟುಂಬದವರಿಗೆ ಆಹಾರ, ದಿನಸಿ, ಅಕ್ಕಿ, ತರಕಾರಿ ವಿತರಿಸಿ ಅನ್ನ ದಾನ ಮಾಡಿದ್ದೀರ. ಕೋವಿಡ್ ರೋಗದ ಕುರಿತು ಅರಿವು ಕಾರ್ಯಕ್ರಮದ ಜೊತೆಗೆ ಸುಮಾರು 1200 ಮಾಸ್ಕ್ ಹಾಗೂ 20 ಲೀಟರ್ ಸ್ಯಾನಿಟೈಸರ್ ಉಚಿತವಾಗಿ ವಿತರಿಸಿ ಬಡವರಿಗೆ ಕೋವಿಡ್ ರೋಗದಿಂದ ರಕ್ಷಿಸಿದ್ದೀರ. ಅನೇಕ ಬಡ ರೋಗಿಗಳಿಗೆ ಮಂಗಳೂರಿನ ಯೆನೆಪೋಯ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಮಾಡಿಸಿ ಅವರಿಗೆ ಆರೋಗ್ಯ ನೀಡಿದ್ದೀರ. ತಂದೆ ತಾಯಿ ಕಳೆದುಕೊಂಡು ಅನಾಥ ಮಕ್ಕಳಿಗೆ ಮನೆ ದುರಸ್ತಿ ಮಾಡಿ, ಆಶ್ರಯ ನೀಡಿದ್ದೀರ. ಈ ರೀತಿ ವಿವಿಧ ಸೇವೆಗಳ ಮುಖಾಂತರ ಜಗಳೂರು ತಾಲ್ಲೂಕಿನ ಅನೇಕ ಗ್ರಾಮದ ಜನರಿಗೆ ಸ್ವಲ್ಪ ಸಮಯದಲ್ಲಿ ಆತ್ಮೀಯರಾಗಿದ್ದೀರ. ಇದಕ್ಕೆಲ್ಲ ಮುಖ್ಯ ಕಾರಣ ನಿಮ್ಮಲ್ಲಿ ಇರುವ ಸೇವಾ ಮನೋಭಾವ, ನಿಸ್ವಾರ್ಥತೆ, ಜಾತಿ, ಭೇದ ಮಾಡದೆ ಎಲ್ಲರಿಗೂ ಸಮಾನತೆಯಿಂದ ಕಾಣುವುದು. ನಾನು ನಿಮ್ಮ ಸಂಸ್ಥೆಗೆ ಭೇಟಿ ನೀಡಿದಾಗ ನಿಮ್ಮ ಸಂಸ್ಥೆಯ ಕುರಿತು ಕೇಳಿ ತುಂಬಾ ಸಂತೋಷವಾಯಿತು. ನಿಮ್ಮ ಸರಳತೆಯ ಜೀವನ, ಪರರ ಮೇಲೆ ಇರುವ ಪ್ರೀತಿ, ಪ್ರೇಮ ನಿಜವಾಗಿ ಮೆಚ್ಚತಕ್ಕದ್ದು.

ಸಾವಿರಾರು ಬಡವರಿಗೆ ಆಸರೆಯಾಗಿರುವ ಪ್ರೇರಣ ಸಮಾಜ ಸೇವಾ ಸಂಸ್ಥೆ ಹಾಗೂ ಇದರ ನಿರ್ದೇಶಕರಾದ ಫಾ. ವಿಲಿಯಂ ಮಿರಾಂದ ಹಾಗೂ ಎಲ್ಲಾ ಸಿಬ್ಬಂದಿಯವರಿಗೆ ಕರುನಾಡ ರಕ್ಷಣಾ ಪಡೆ, ಸರ್ವ ಪದಾಧಿಕಾರಿಗಳ ಪರವಾಗಿ ಹೃದಯಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಯಾವತ್ತೂ ನಿಮ್ಮ ಸಂಸ್ಥೆಗೆ ನಮ್ಮ ಸಂಘಟನೆಯಿಂದ ಸಂಪೂರ್ಣ ಸಹಕಾರ ಇದೆ. ನಿಮ್ಮ ಎಲ್ಲಾ ರೀತಿಯ ಸಮಾಜ ಸೇವಾ ಕಾರ್ಯಗಳಿಗೆ ದೇವರು ಆಶೀರ್ವದಿಸಲಿ ಎಂದು ಶುಭ ಕೋರುತ್ತವೆ.

ಇಂತಿ ನಿಮ್ಮ ಸೇವಾಕಾಂಕ್ಷಿ

ಮಂಜುನಾಥ್. ಎಲ್. ವಿ
ಕರುನಾಡ ರಕ್ಷಣಾ ಪಡೆ, ರಾಜ್ಯ ಅಧ್ಯಕ್ಷರು
ಬೆಂಗಳೂರು

ಕಛೇರಿ : ಶ್ರೀ ರಾಘವೇಂದ್ರ ಮಠ ಕಾಲೋನಿ, ಕಮ್ಮಗೊಂಡನಹಳ್ಳಿ, ಬೆಂಗಳೂರು -560015

KARNATAKA Dtv

www.dtvkarnataka.com



# ಸಂದೇಶ

ಪರರ ಸೇವೆಯೇ ಪರಮಾತ್ಮನ ಸೇವೆ ಎಂಬ ಮಾತಿನಂತೆ ಜಾತಿ, ಮತ, ಭಾಷೆ ಎಂಬ ಭೇದ ಇಲ್ಲದೆ ಸರ್ವರಿಗೂ ಸಮಾನವಾಗಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆ ಅಂದರೆ ಪ್ರೇರಣ ಸಮಾಜ ಸೇವಾ ಸಂಸ್ಥೆ, ಚರ್ಚ್ ಜಗಳೂರು. ನಾಲ್ಕು ವರ್ಷಗಳ ಹಿಂದೆ ಈ ಸಂಸ್ಥೆಯಲ್ಲಿ ಏನಾಗುತ್ತಿದೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ಫಾ.ವಿಲಿಯಂ ಮಿರಾಂದರವರು ನಿರ್ದೇಶಕರಾಗಿ ಬಂದ ನಂತರ ಅವರು ಎಲ್ಲಾ ಜನಾಂಗದವರು, ಎಲ್ಲಾ ಸಂಘಟನೆ ಜೊತೆಗೆ ಸಂಪರ್ಕವನ್ನು ಬೆಳೆಸಿ ಅನೇಕ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಪ್ರಸಿದ್ಧಿ ಹೊಂದಿದರು. ಪ್ರೇರಣ ಸಮಾಜ ಸೇವಾ ಸಂಸ್ಥೆಯ ಜೊತೆ ನನ್ನ ನಂಟು ಸುಮಾರು ನಾಲ್ಕು ವರ್ಷಗಳು. ಫಾದರ್‌ರವರು ಮಾಡುವ ಎಲ್ಲಾ ಸಮಾಜ ಸೇವಾ ಕಾರ್ಯಗಳಲ್ಲಿ ನಾನು ಭಾಗವಹಿಸಿದ್ದೇನೆ ಎಂದು ಹೇಳಲು ಹೆಮ್ಮೆ ಆಗುತ್ತದೆ. ಯಾಕೆಂದರೆ ಅವರು ಮಾಡುವ ಕೆಲಸ/ ಸೇವೆ ನಿಸ್ವಾರ್ಥ ಸೇವೆ. ಯಾವುದೇ ಆಸೆ ಆಕಾಂಕ್ಷೆಗಳಿಲ್ಲದೆ ನಿಜವಾದ ಬಡ ಜನರ ಸೇವೆ ಅವರದು. ಜಗಳೂರು ತಾಲ್ಲೂಕು ಹಿಂದುಳಿದ ತಾಲ್ಲೂಕು. ಮಳೆ ಬಹಳ ವಿರಳ. ಹೆಚ್ಚಿನ ರೈತರು ಮಳೆಯನ್ನೇ ಅವಲಂಭಿಸಿ ಬೆಳೆ ಬೆಳೆಯುವವರು. ಹೆಚ್ಚಿನ ಜನರು ಬಡತನ ರೇಖೆಗಿಂತ ಕೆಲವರ್ಗದವರು ಕೂಲಿ ಕೆಲಸ ಮಾಡಿ ಜೀವನ ಸಾಗಿಸುವವರು. ಇಂತಹ ಹಿಂದುಳಿದ ತಾಲೂಕಿನಲ್ಲಿ ಫಾದರ್‌ರವರು ಪ್ರೇರಣ ಸಮಾಜ ಸೇವಾ ಸಂಸ್ಥೆಯ ಮೂಲಕ ವಿವಿಧ ಶಿಬಿರಗಳನ್ನು, ತರಬೇತಿಗಳನ್ನು ಆಯೋಜಿಸಿ ಬಡವರಿಗೆ ಆಸರೆಯಾಗಿದ್ದಾರೆ. ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ, ಉಚಿತ ದಂತ ತಪಾಸಣೆ ಶಿಬಿರಗಳು, ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ, ಅನಾರೋಗ್ಯದಲ್ಲಿ ಇದ್ದವರಿಗೆ ಮಂಗಳೂರಿನ ಯೆನೆಪೋಯ ಆಸ್ಪತ್ರೆಯಲ್ಲಿ ಚಿಕಿತ್ಸೆಯ ವ್ಯವಸ್ಥೆ. ವಿವಿಧ ರೀತಿಯ ಅರಿವು ನೀಡುವ ಕಾರ್ಯಕ್ರಮಗಳು. ನಿರುದ್ಯೋಗಿ ಮಹಿಳೆಯರಿಗೆ ಉಚಿತ ಟೈಲರಿಂಗ್ ತರಭೇತಿ. ವಿಶೇಷವಾಗಿ ಕೋವಿಡ್ –19 ಲಾಕ್ ಡೌನ್ ಸಮಯದಲ್ಲಿ ಸಾವಿರಾರು ಬಡವರಿಗೆ ರೇಷನ್, ಅಕ್ಕಿ, ತರಕಾರಿ, ಮಾಸ್ಕ್, ಸ್ಯಾನಿಟೈಸರ್, ಇತ್ಯಾದಿ ಉಚಿತವಾಗಿ ವಿತರಣೆ ಮಾಡಿದ್ದಾರೆ. ಇಂತಹ ಸೇವಾ ಸಂಸ್ಥೆ ಜಗಳೂರು ತಾಲ್ಲೂಕಿನಲ್ಲಿ ಇರುವುದು ನಿಜವಾಗಿಯೂ ಬಡವರ ಭಾಗ್ಯ. ಕಳೆದ ವರ್ಷದ ಎಲ್ಲಾ ಸಮಾಜ ಸೇವಾ ಕಾರ್ಯಗಳನ್ನು ಸ್ಮರಣ ಸಂಚಿಕೆಯಲ್ಲಿ ಹೊರತರುವ ನಿಮಗೆ ಶುಭಾಶಯಗಳು. ಪ್ರೇರಣ ಸಮಾಜ ಸೇವಾ ಸಂಸ್ಥೆ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸುತ್ತೇನೆ

**ಮೋಹ್ಮದ್ ಅಬ್ದುಲ್ ರಖೀಬ್ ಜೆ.ಎಫ್**
ಡಿ.ಟಿವಿ ಸಂಸ್ಥಾಪಕರು ಹಾಗೂ ಪತ್ರಿಕೆ ವರದಿಗಾರರು
ಜಗಳೂರು
Mob: 9019589994 / 8762222959


## ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ.)

**ಜಗಳೂರು ತಾಲ್ಲೂಕು ಸಮಿತಿ, ಹಳೆ ಬಸ್‌ನಿಲ್ದಾಣದ ಹತ್ತಿರ,**

ಮರೇನಹಳ್ಳಿ ರಸ್ತೆ, ಜಗಳೂರು ಟೌನ್, ದಾವಣಗೆರೆ ಜಿಲ್ಲೆ.

| ಅಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಖಜಾಂಚಿ |
|---|---|---|
| ಕಾಂ॥. ಮಹಮ್ಮದ್ ಬಾಷಾ, | ಕಾಂ॥. ಮಾದಿಹಳ್ಳಿ ಮಂಜುನಾಥ | ಕಾಂ॥. ಡಿ.ಟಿ. ಗೌರಮ್ಮ |
| ಫೋ.ನಂ.: 9448812593. | ಫೋ.ನಂ.: 7899872896 | ಫೋನ್ ನಂ.: 7795584055 |


**ಪ.ಸಂ.:** **ದಿನಾಂಕ:** ..............................



ತಂದೆಯ ಮುಂದೆ ನಾವೆಲ್ಲ ಒಂದೇ ಎಂಬ ಮಾತಿನ ಪ್ರಕಾರ ಸರ್ವರನ್ನೂ ನಿಸ್ವಾರ್ಥ ಭಾವನೆಯಿಂದ ಎಲ್ಲರ ಭಾವನೆಗಳನ್ನು ಅರ್ಥ ಮಾಡಿ ಸಹಾಯ ಹಸ್ತ ನೀಡುವ ಸಂಸ್ಥೆ ಪ್ರೇರಣ ಸಮಾಜ ಸೇವಾ ಸಂಸ್ಥೆ ಚರ್ಚ್ ಜಗಳೂರು. ಎ.ಐ.ಟಿ.ಯು.ಸಿ ತಾಲ್ಲೂಕು ಘಟಕ ಹಾಗೂ ದಾವಣಗೆರೆ ಜಿಲ್ಲಾ ಸಂಘಟನೆಯ ಅನೇಕ ಕಾರ್ಯಕ್ರಮ ಹಾಗೂ ಕಾರ್ಯಾಗಾರಗಳನ್ನು ಫಾದರ್ ವಿಲಿಯಂ ಮಿರಾಂದರವರು ಪ್ರೇರಣ ಸಮಾಜ ಸೇವಾ ಸಂಸ್ಥೆಯಲ್ಲಿ ಉಚಿತವಾಗಿ ನಡೆಸಿ ಕೊಟ್ಟಿದ್ದಾರೆ.

ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕಿಯರ ಸಂಘಟನೆ, ಅಕ್ಷರ ದಾಸೋಹ ಬಿಸಿ ಊಟ ತಯಾರಕರ ಫೆಡರೇಶನ್, ಕರ್ನಾಟಕ ರಾಜ್ಯ ಟೈಲರ್ ಮತ್ತು ಸಹಾಯಕರ ಫೆಡರೇಶನ್. ಆಶಾ ಕಾರ್ಯಕರ್ತೆಯರ ಸಂಘಟನೆ, ಕಟ್ಟಡ ಕಾರ್ಮಿಕರ ಸಂಘಟನೆಗಳ ವಿವಿಧ ಕಾರ್ಯಗಳನ್ನು ಪ್ರೇರಣ ಸಮಾಜ ಸೇವಾ ಸಂಸ್ಥೆ ನಡೆಸಿ ಕೊಟ್ಟು ಸಂಘಟನೆಗಳ ಒಗ್ಗಟ್ಟನ್ನು ಬಲಗೊಡಿಸುವಲ್ಲಿ ಪ್ರೇರಣೆಯಾಗಿದೆ. ಅಷ್ಟೇ ಅಲ್ಲದೇ ಗ್ರಾಮಾಂತರ ಬಡ ಜನರಿಗೆ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಆರೋಗ್ಯ ಭಾಗ್ಯ ನೀಡುತ್ತಿದ್ದಾರೆ. ಇಂತಹ ಜನೋಪಯೋಗಿ ಸೇವಾಕಾರ್ಯಗಳ ಮುಖಾಂತರ ಫಾ. ವಿಲಿಯಂ ಮಿರಾಂದರವರು ಜಗಳೂರು ತಾಲ್ಲೂಕಿನ ಬಡವರ ಬಂಧು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪ್ರೇರಣ ಸಮಾಜ ಸೇವಾ ಸಂಸ್ಥೆಯ ಸೇವಾ ಕಾರ್ಯಗಳು ಅನೇಕರಿಗೆ ಪ್ರೇರಣೆಯಾಗಿದೆ. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜಗಳೂರು ತಾಲ್ಲೂಕು ಹಾಗೂ ದಾವಣಗೆರೆ ಜಿಲ್ಲಾ ಸಂಘಟನೆಯ ಪರವಾಗಿ ಅಭಿನಂದನೆ ಸಲ್ಲಿಸಿ ಶುಭ ಕೋರುತ್ತೇವೆ.

**ಕಾಂ. ಮಹಮ್ಮದ್ ಬಾಷಾ**
ಅಧ್ಯಕ್ಷರು – ಎ.ಐ.ಟಿ.ಯು.ಸಿ

## ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ತಾಲ್ಲೂಕು ಸಂಸ್ಥೆ

**ಜಗಳೂರು-577 528. :: :: ದಾವಣಗೆರೆ ಜಿಲ್ಲೆ**



# ಸಂದೇಶ

ಪ್ರೇರಣ ಸಮಾಜ ಸೇವಾ ಸಂಸ್ಥೆ(ರಿ), ಚರ್ಚ್ ಜಗಳೂರು. ಇದು ಜಗಳೂರಿನ ಸರ್ವತೋಮುಖ ಅಭಿವೃದ್ಧಿಗೆ ಸಮಾಜ ಸೇವೆ ಸಲ್ಲಿಸುವ ಸಂಸ್ಥೆಯಾಗಿದೆ. ಬರ ಹಾಗೂ ಹಿಂದುಳಿದ ತಾಲೂಕುಗಳಲ್ಲೊಂದಾಗಿದೆ. ಈ ತಾಲೂಕಿಗೆ ಈ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಲಿಯಂ ಮಿರಾಂದ ಹಾಗೂ ಸಿಬ್ಬಂಧಿ ವರ್ಗದವರು ತಮ್ಮ ಸೇವೆಗಾಗಿ ಕಾದು ಕುಂತ ಜಾತಕ ಪಕ್ಷಿಯಂತೆ, ದೇವರೆ ಕಳುಹಿಸಿದ ಪ್ರತಿರೂಪದಂತೆ, ದೀನ ದಲಿತರ, ಹಿಂದುಳಿದ ಹಾಗೂ ಕಷ್ಟದಲ್ಲಿರುವವರಿಗೆ, ಶೈಕ್ಷಣಿಕ ಹಿತಾದೃಷ್ಠಿಯಿಂದ ಮಕ್ಕಳ ಶ್ರೇಯಾಭಿವೃದ್ಧಿಗೆ ಸೇವೆಗಾಗಿ ದುಡಿಯಲು ಬಂದಿರುತ್ತಾರೆ

ಸಾಮಾಜಿಕ, ಆರ್ಥಿಕ, ಆರೋಗ್ಯ, ಹಾಗೂ ಮಾನಸಿಕ ಬೆಳವಣಿಗೆಗಾಗಿ, ಮಹಾತ್ಮ ಗಾಂಧೀಜಿಯವರು ಕಂಡ ಕನಸಿನಂತೆ, ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಹಗಲಿರುಳು ಶಮಿಸುತಿದ್ದಾರೆ. ಕೋವಿಡ್–19ರ ಪ್ರಭಾವದಿಂದ ಸಂಕಷ್ಟಕ್ಕೊಳಗಾದ ಜನರ ಬದುಕಿಗಾಗಿ ಸಹಾಯ ಹಸ್ತದ ಜೊತೆಗೆ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ. ತಾಲೂಕಿನಲ್ಲಿ ಕಣ್ಣಿನ ತಪಾಸಣೆ ಶಿಬರ, ಟೈಲರಿಂಗ್ ತರಬೇತಿ, ಅನೇಕ ಕರಕುಶಲ ತರಬೇತಿ ಶಿಬಿರಗಳನ್ನು ಏರ್ಪಡಿಸಿ, ಅವರ ಜೀವನಕ್ಕೆ ದಾರಿದೀಪವಾಗುವ ಕೆಲಸ ಮಾಡುತ್ತಿದ್ದಾರೆ. ತಾಲೂಕಿನ ಸ್ಕೌಟ್ಸ್–ಗೈಡ್ಸ್ ಸ್ಥಳೀಯ ಸಂಸ್ಥೆ, ಸಾರ್ವಜನಿಕ ಶಿಕ್ಷಣ ಇಲಾಖೆಯಡಿಯಲ್ಲಿನ ಮಕ್ಕಳ, ಶಿಕ್ಷಕರ ಶಿಬಿರ, ತರಬೇತಿ ಸಭೆಗಳಿಗೆ ತನು–ಮನು–ಧನ ನೀಡುವುದರ ಜೊತೆಗೆ ವಸತಿಯುತ ಸೌಲಭ್ಯ ನೀಡಿ, ಮಕ್ಕಳ ಶೈಕ್ಷಣಿಕ ಹಾಗೂ ಜೀವನ ಕಟ್ಟಿಕೊಳ್ಳುವ ಮಾರ್ಗದರ್ಶನ ನೀಡಿದ್ದಾರೆ.

ಸದಾ ಸೇವೆ ಮಾಡುತ್ತ ಬಂದಿರುವ ಈ ಸಂಸ್ಥೆಯ ನಾಯಕರಾದ ಫಾದರ್ ವಿಲಿಯಂ ಮಿರಾಂದರವರು ತಮ್ಮ ನಿಸ್ವಾರ್ಥ ಸೇವೆಯು ಜನರ ಸೇವೆಗೆ ಮುಡಿಪಾಗಿರಲಿ. ಇವರ ಹಾಗೂ ಇವರ ಸಿಬ್ಬಂಧಿಗೆ ಭಗವಂತ ಆಯುರಾರೋಗ್ಯ–ಐಶ್ವರ್ಯಭಾಗ್ಯ ಕರುಣಿಸಲಿ ಎಂದು ನಾನು ಹಾಗೂ ನಮ್ಮ ಸ್ಕೌಟ್ಸ್–ಗೈಡ್ಸ್ ಸ್ಥಳೀಯ ಸಂಸ್ಥೆಯ ಎಲ್ಲಾ ಶಿಕ್ಷಕರು ಆ ದೇವರಲ್ಲಿ ಬೇಡಿಕೊಳ್ಳುತ್ತೇವೆ.

ಫಾದರ್ ವಿಲಿಯಂ ಮಿರಾಂದ ಸಿಬ್ಬಂದಿಯವರಿಗೆ ಹಾರ್ಧಿಕ ಶುಭಾಶಯಗಳನ್ನು ಸಲ್ಲಿಸುತ್ತೇನೆ. “ಮಾನವ ಜನ್ಮ ಬಹುದೊಡ್ಡದು, ಹಾಳು ಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ” ಎನ್ನುವ ನಾಣ್ಣುಡಿಯಂತೆ – ಇವರ ಸೇವೆ ಅಮರವಾದುದದು. ಸದಾ ನಿಮ್ಮ ಸೇವೆಗಾಗಿ, ನಮ್ಮ ಸಂಸ್ಥೆಯು ಕಾಯುತ್ತಿದೆ. ನಿಮ್ಮ ಅಳಲು ತೋಡಿಕೊಂಡಾಗ ನಮ್ಮ ಸೇವೆ ಸದಾ ಸಿದ್ಧ. ಎಂದು ವಿಶಾಲ ಮನಸ್ಸು, ಹೃದಯ, ಸಹಾಯ–ಹಸ್ತ ನೀಡುವ ಪ್ರೇರಣಾ ಸಮಾಜ ಸೇವಾ–ಸಂಸ್ಥೆಯ ತಂಡದರಿಗೆ ನಮ್ಮಿಂದ ಹೃದಯ ಪೂರ್ವಕವಾಗಿ ಶುಭ ಹಾರೈಸುತ್ತೇನೆ. ಭಗವಂತ ಯೇಸು ನಿಮ್ಮ ಸಿಬ್ಬಂದಿಯವರಿಗೆ ಒಳ್ಳೆಯ ಆರೋಗ್ಯ, ಸೇವೆ ಮಾಡಲು ಬೇಕಾದ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇನೆ.

* ವಂದನೆಗಳೊಂದಿಗೆ *

ಕಾರ್ಯದರ್ಶಿಗಳು, ದಿ ಭಾರತ್ ಸ್ಕೌಟ್ಸ್–ಗೈಡ್ಸ್
ತಾಲೂಕು ಸ್ಥಳೀಯ ಸಂಸ್ಥೆ – ಜಗಳೂರು

# ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ

## AIUTUC (ಸಂಯೋಜಿತ)

**ಜಗಳೂರು ತಾಲ್ಲೂಕು ಸಮಿತಿ, ದಾವಣಗೆರೆ ಜಿಲ್ಲೆ.**
**ಮೊಬೈಲ್ : 9535510912**

ಜಗಳೂರು ಪಟ್ಟಣದ ಪ್ರೇರಣಾ ಸಮಾಜ ಸೇವಾ ಸಂಸ್ಥೆ ನೊಂದವರ, ನಿರ್ಗತಿಕರ ಅಭ್ಯುದಯಕ್ಕಾಗಿ ನಿರಂತರವಾಗಿ ಅವಿರತವಾಗಿ ಶ್ರಮಿಸುತ್ತಿದೆ. ಅದರಲ್ಲೂ ವಿಶಿಇಂಷಂವಾಗಿ "ಫಾದರ್. ಮಿಲಿಯಂ ಮಿರಾಂದಾ" ಅವರ ಸೇವೆ ಶ್ಲಾಘನೀಯ.

ಸಂಸ್ಥೆ ತಾಲ್ಲೂಕಿನಲ್ಲಿ ಹಲವಾರು ಸಾಮಾಜಿಕ ಚಟುವಟಿಕೆಗಳನ್ನು ಮಾಡುವುದರ ಜೊತೆಗೆ ಕೋವಿಡ್ ಸಂದರ್ಭದಲ್ಲಿ ಬಡಜನರಿಗೆ ಎಲ್ಲಾ ರೀತಿಯಿಂದಲೂ ನೆರವು ನೀಡಿದೆ. ಹೀಗೆ ನಿರಂತರವಾಗಿ ಅವರ ಸೇವೆ ಮುಂದುವರೆಯಲಿ ಎಂದು ಆಶಿಸುತ್ತಾ, ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆಗೆ ಶುಭ ಹಾರೈಸುತ್ತಿದ್ದೇವೆ.

ವಂದನೆಗಳೊಂದಿಗೆ,
**ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ**
AIUTUC (ಸಂಯೋಜಿತ)
ಜಗಳೂರು ತಾಲ್ಲೂಕು ಸಮಿತಿ, ದಾವಣಗೆರೆ ಜಿಲ್ಲೆ.




# ಸಂದೇಶ

ದಿನಾಂಕ :...............................

ಸರ್ವರಿಗೂ ನಮಸ್ಕಾರಗಳು.

ಜಗಳೂರು ತಾಲ್ಲೂಕಿನಲ್ಲಿ ಸರ್ವಜನರ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಪ್ರೇರಣ ಸಮಾಜ ಸೇವಾ ಸಂಸ್ಥೆಯು, ತನ್ನ ಕಳೆದ ಸಾಲಿನ ಸಮಾಜ ಸೇವಾ ಕಾರ್ಯಗಳನ್ನು ಸ್ಮರಣ ಸಂಚಿಕೆಯಲ್ಲಿ ಮುದ್ರಣ ಮಾಡುವ ತಮಗೆ ನನ್ನ ಅಭಿನಂದನೆ ಸಲ್ಲಿಸುತ್ತೇನೆ. ಯಾವುದೇ ವ್ಯಕ್ತಿಯು ತನ್ನ ಸಮಸ್ಯೆಗಳನ್ನು ಹೊತ್ತುಕೊಂಡು ಫಾದರ್ ವಿಲಿಯಂ ಮಿರಾಂದರವರ ಕಛೇರಿಯಗೆ ಹೋದರೆ ಅವರು ಪರಿಹಾರ ಪಡೆದು ಹಿಂತಿರುಗಿ ಬರುವುದನ್ನು ನಾನು ಅನೇಕ ಬಾರಿ ಕಣ್ಣಾರೆ ಕಂಡಿದ್ದೇನೆ. ಅಲೆಮಾರಿಗಳು ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಅನೇಕ ಸಲ ಬಟ್ಟೆ, ರೇಷನ್ ನೀಡುವ ಮೂಲಕ ಅವರ ಮುಖದಲ್ಲಿ ನಗು ತಂದಿದ್ದಾರೆ. ಕಣ್ಣಿನ ತಪಾಸಣಾ ಹಾಗೂ ಶಸ್ತ್ರಚಿಕಿತ್ಸೆ ಶಿಬಿರಗಳನ್ನು ಏರ್ಪಡಿಸಿ ಸಾವಿರಾರು ಜನರ ಕಣ್ಣಿನ ಸಮಸ್ಯೆ ಬಗೆಹರಿಸುವ ಮೂಲಕ ಅವರಿಗೆ ದಾರಿ ದೀಪವಾಗಿದ್ದೀರಿ. ಶಿಕ್ಷಣ ಮುಂದುವರಿಸಲು ಅನೇಕ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ವಿದ್ಯಾದಾನ ದ ಮೂಲಕ ಅವರ ಭವಿಷ್ಯ ರೂಪಿಸಿದೆ. ಕೊರೊನ ಮಾರಕ ರೋಗ ಹರಡುತ್ತಿರುವ ಸಂದರ್ಭದಲ್ಲಿ ನೂರಾರು ಹಸಿದ ಕುಟುಂಬಗಳಿಗೆ ಮನೆ ಮನೆಗೆ ಹೋಗಿ ಆಹಾರದ ಪೊಟ್ಟಣ ನೀಡಿದ ಸಂಸ್ಥೆ ಪ್ರೇರಣ ಸಂಸ್ಥೆ. ನಾನು ಅನೇಕ ಸಲ ಪ್ರೇರಣ ಸಮಾಜ ಸೇವಾ ಕಾರ್ಯಗಳಲ್ಲಿ ಭಾಗಿಯಾಗಿದ್ದೇನೆ. ಅನೇಕ ಜನಪರ ಕೆಲಸವನ್ನು ಮಾಡುವ ಮೂಲಕ ಕೆಲವೇ ವರ್ಷಗಳಲ್ಲಿ ಜನರ ಮನಗೆದ್ದಿದ್ದಾರೆ. ಅತ್ಯಾವಶ್ಯಕ ಇರುವ ಪ್ರತಿಯೊಬ್ಬರಿಗೂ ಸ್ಪಂದಿಸಿ ಪ್ರೋತ್ಸಾಹ ನೀಡುವ ಸಂಸ್ಥೆ ಇದಾಗಿದೆ. ಈ ಎಲ್ಲಾ ಯಶಸ್ವಿಗೆ ಕಾರಣ ಕರ್ತರಾಗಿದ್ದಾರೆ ಇದರ ನಿರ್ದೇಶಕರು ಫಾದರ್ ವಿಲಿಯಂ ಮಿರಾಂದ. ಯಾವ ಸಮಯದಲ್ಲಿಯೂ ಜನರಿಗೆ ಸ್ಪಂದಿಸುವ ವ್ಯಕ್ತಿತ್ವ ಇವರದು. ಈ ಸಂದರ್ಭದಲ್ಲಿ ನಾನು ಪ್ರೇರಣ ಸಮಾಜ ಸೇವಾ ಸಂಸ್ಥೆಯ ಫಾದರ್ ವಿಲಿಯಂ ಮಿರಾಂದ ಹಾಗೂ ಎಲ್ಲಾ ಗುರುಗಳಿಗೆ, ಸಿಬ್ಬಂದಿ ವರ್ಗದವರಿಗೆ ಕರುನಾಡ ರಕ್ಷಣಾ ಪಡೆಯ ವತಿಯಿಂದ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಸೇವೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಡವರಿಗೆ, ದೀನ ದಲಿತರಿಗೆ, ನೊಂದವರಿಗೆ ತಲುಪಲಿ ಎಂದು ದೇವರನ್ನು ಪ್ರಾರ್ಥಿಸುತ್ತೇನೆ

ಎಸ್.ಆರ್. ಇಂದಿರಾ.

ಎಸ್.ಆರ್.ಇಂದಿರಾಗುರುಸ್ವಾಮಿ
ದಾವಣಗೆರೆ ಜಿಲ್ಲಾ ಮಹಿಳಾ ಅಧ್ಯಕ್ಷರು
ಕರುನಾಡ ರಕ್ಷಣಾ ಪಡೆ (ನೊಂ.)

ಕಛೇರಿ : ಸಿದ್ದಮ್ಮಹಳ್ಳಿ, ಭರಮಸಮುದ್ರ ಅಂಚೆ, ಜಗಳೂರು ತಾ॥, ದಾವಣಗೆರೆ ಜಿಲ್ಲೆ- 577528.

## ಜಗಳೂರು ತಾಲ್ಲೂಕು ಉಪಘಟಕ

## ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಕರ ಬಳಗ (ರಿ),

**(ಖಾಸಗಿ ಶಿಕ್ಷಕರು ಮತ್ತು ಉಪನ್ಯಾಸಕರ ಒಕ್ಕೂಟ)**

2nd Cross, Near Sri Manjunath Provision Store, Rakshnapura, Hassan 573201

ವಂದನೀಯ  ಫಾದರ್ ವಿಲಿಯಂ ಮಿರಾಂದರವರಿಗೆ ಮನದ ನೆನಪಿನ ಜಗಳೂರು ಖಾಸಗಿ ಶಾಲಾ ಶಿಕ್ಷಕರುಗಳ ಅಭಿನಂದನಾ ಪತ್ರವನ್ನು ತಮ್ಮ ಸೇವಾ ಹ್ರದಯಕ್ಕೆ ಶುಭಾಶಯಗಳನ್ನು ಸಲ್ಲಿಸುತ್ತೇವೆ.

ನಿಮ್ಮ ಸೇವೆಯಲ್ಲಿ ನಾವು ಕಂಡ ಜಗಳೂರು.

- ಕೊರೋನ ಲಾಕ್ ಡೌನ್ ಸಮಯದಲ್ಲಿ ಖಾಸಗಿ ಶಾಲಾ ಶಿಕ್ಷಕರನ್ನು ಗುರುತಿಸಿ ಪ್ರೇರಣ ಸಮಾಜ ಸಂಸ್ಥೆಯ ಆವರಣದಲ್ಲಿ 50 ಕ್ಕೂ ಹೆಚ್ಚು ಶಿಕ್ಷಕರಿಗೆ ಆಹಾರದ ಕಿಟ್ ವಿತರಣೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದಿರಿ.
- ಖಾಸಗಿ ಶಾಲೆಗಳನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ಉಚಿತ ಕಣ್ಣಿನ ತಪಾಸಣೆ ಮಾಡಿಸಿ ಸುಮಾರು ಮಕ್ಕಳಿಗೆ ಕನ್ನಡಕಗಳನ್ನು ಬೆಳಕಿನ ಆಶಾ ಕಿರಣ ಮಾಡಿಸಿದಿರಿ.
- ಕೋರೋನ ಸಮಯದಲ್ಲಿ ನಮ್ಮ ಶಾಲೆಗಳಿಗೆ ಸ್ಯಾನಿಟೈಸರ್ ಮತ್ತು ಮಾಸ್ಕ್ ನೀಡಿ ತಮ್ಮ ಸಮಾಜ ಸೇವೆ  ಈ ಮುದ್ದು ಮಕ್ಕಳ ನೆನಪಿನಲ್ಲಿ ಉಳಿದಿರಿ.
- ಪ್ರತಿ ವರ್ಷವೂ ಖಾಸಗಿ ಶಾಲೆಗಳಲ್ಲಿ S.S.L.C ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ತಮ್ಮ ಕಡೆಯಿಂದ ಪ್ರೋತ್ಸಾಹ ಧನ ನೀಡಿ ಮುಂದಿನ ವ್ಯಾಸಂಗಕ್ಕೆ ಸ್ಪೂರ್ತಿಯಾಗಿದ್ದೀರ.
- ತಾಲ್ಲೂಕು ಖಾಸಗಿ ಶಿಕ್ಷಕರ ಸಂಘಟನೆಯಲ್ಲಿ ತಮ್ಮ ಸಮಾಜ ಸಂಸ್ಥೆಯು ತುಂಬು ಹ್ರದಯದಿಂದ ಸ್ವಾಗತಿಸಿ ನಿಮ್ಮ ಸಭಾಂಗಣದಲ್ಲಿ ನಡೆಸಿ ಕೊಟ್ಟ ಕಾರ್ಯಕ್ರಮವು ಕರುನಾಡಿಗೆ ಮರು ಜೀವ ನೀಡಿದಂತಿತ್ತು.
- ಖಾಸಗಿ ಶಾಲೆಯ ಶಿಕ್ಷಕರು ಎಂದಾಗ ನವಚೇತನ ಶಾಲೆಯ ಗೌರವಾನ್ವಿತ ಕಾರ್ಯದರ್ಶಿಗಳಾದ ಡಾ. ಪಿ.ಎಸ್. ಅರವಿಂದ್ ಹಾಗೂ ಫಾದರ್ ನೀವು ಬಂಡಿಗೆ ಎರಡು ಚಕ್ರಗಳಾಗಿ ಸದಾ ಬದುಕಿನ ಬಂಡಿಯನ್ನು  ನಡೆಸುತ್ತೀರಿ. ಈ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿರುತ್ತೆ.
- ನಮ್ಮ ಖಾಸಗಿ ಶಾಲೆಗಳಲ್ಲಿ ಬಡ ಮಕ್ಕಳನ್ನು ಗುರುತಿಸಿ ಅವರಿಗೆ ಯಾವುದಾದರೂ ಮಾರ್ಗದಲ್ಲಿ ಸಹಾಯ ಮಾಡಲು ಮಕ್ಕಳಿಂದ ಚಿತ್ರಕಲೆ ಸ್ಪರ್ದೆ ಏರ್ಪಡಿಸಿ ಅವರ ಶಾಲ ಶುಷ್ಕ ನೀವೇ ಭರಿಸುತ್ತೀರ.
- ನಮ್ಮ ಖಾಸಗಿ ಶಾಲೆಯ ಮಕ್ಕಳನ್ನು ಒಂದು ದಿನದ ಕ್ರೀಡಾ ಆಟವನ್ನು ತಮ್ಮ ಸಮಾಜ ಸೇವಾ ಸಂಸ್ಥೆಯ ಅಂಗಳದಲ್ಲಿ ಆಡಿಸಿ, ಗೆದ್ದ ಮಕ್ಕಳಿಗೆ ತಾವೇ ಬಹುಮಾನ, ತಿಂಡಿ,ಪುಸ್ತಕಗಳನ್ನು ಕೊಟ್ಟಿದ್ದು ಮಕ್ಕಳ ಮನದಲ್ಲಿ ನೀವು ಕಾನುತ್ತಿದ್ದೀರಿ. ಹೀಗೆ ತಮ್ಮ ಸೇವಾ ಮನೋಭಾವನೆಯಿಂದ ತ್ರಪ್ತರಾದ ನಾವು ನಿಮಗೆ ಸದಾ ಚಿರ ಋಣಿಗಳಾಗಿರುತ್ತೇವೆ.

ನಾಳೆಯ ನಂಬಿ ಮುಂದೂಡದಿರ ನಿಮ್ಮ ಮನಸ್ಸು. ಇಂದಿನ ದಿನವೇ ಅಮೂಲ್ಯವಾದುದು ಎಂದು ನೀವು ಕಂಡ ಕನಸು.ತಾಲ್ಲೂಕಿನ ಎಲ್ಲಾ ಶಿಕ್ಷಕರನ್ನು ಗೌರವದಿಂದ ಕಂಡ ನಿಮ್ಮ ಮನ. ಜಗಳೂರು ತಾಲ್ಲೂಕಿನ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಕಡೆ ಆನಂದಿಸಿ ನೋಡುತ್ತಿತ್ತು ನಿಮ್ಮ ಸಹ್ರದತೆಯನ್ನು ಕಂಡು ತಾಲ್ಲೂಕಿನ ಈ ಜನ.

ಯಾವ ದೇಶದ ರಾಜ ಅಶಕ್ತನಾಗಿರುವನೂ ಆ ದೇಶದ ಮಂತ್ರಿಗಳು, ಪ್ರಜೆಗಳು ಮೈಗಳ್ಳರಾಗುತ್ತಾರೆ, ಎಂಬ ನಾನುಡಿಯಂತೆ  ಸದಾ ಉತ್ಸಾಹದಿಂದಲೇ ಚಿಮ್ಮುವ ಚಿಲುಮೆಯಾಗಿ ಈ ತಾಲ್ಲೂಕಿನ ಜನರ ಸಮಾಜ ಸೇವೆಯಲ್ಲಿ ನಿಮ್ಮ ಅನನ್ಯ ಕೆಲಸಕ್ಕೆ ನಮ್ಮದೊಂದು ಅಭಿನಂದನೆ.

ಜಗಳೂರು ತಾಲ್ಲೂಕಿನ ಪ್ರೇರಣ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಲಿಯಂ ಮಿರಾಂದರವರಾದ ನಿಮ್ಮ ಸಮಾಜ ಸೇವೆಯು ಜಗಳೂರಿಗೆ ಮಾತ್ರ ಸೀಮಿತವಾಗದೆ,ಜಿಲ್ಲೆ, ರಾಜ್ಯ, ದೇಶಕ್ಕೆ ಮಾದರಿಯಾಗಲಿ ಎಂಬುದು ಈ ತಾಲ್ಲೂಕಿನ ಖಾಸಗಿ ಶಾಲೆಯ ಶಿಕ್ಷಕರು,ಅಧ್ಯಕ್ಷರು,ಕಾರ್ಯದರ್ಶಿಗಳ ಆಸೆಯಾಗಿದೆ.

ಋತುಮಾನಗಳಲ್ಲಿ ಶ್ರಾವಣಕ್ಕಿಂತ ಮೊದಲೇ ಆಷಾಡ ಮಾಸ ಬರುತ್ತದೆ.
ಆದರೆ ಶ್ರಾವಣ ಮಾಸದಲ್ಲಿ ಅತಿ ಹೆಚ್ಚು ಮಳೆ ಬರುತ್ತದೆ.
ಹಾಗೆ ನೀವು ಜಗಳೂರಿಗೆ ಶ್ರಾವಣ ಮಾಸದಂತೆ ಕಂಡಿದ್ದೀರಿ ಎಂದು ನೆನಪಿಸುವ ನಿಮ್ಮ ಕ.ರಾ.ಖಾ.ಶಾ.ಶಿಕ್ಷಕರ ಸಂಘದ ಅಧ್ಯಕ್ಷರು

H. [signature]

**ಊ.ಬಸವರಾಜಪ್ಪ**
ಕನ್ನಡ ಶಿಕ್ಷಕರು
ನವಚೇತನ ಆಂಗ್ಲ ಮಾದ್ಯಮ ಶಾಲೆ
ಜಗಳೂರು.

ಒಳಿತು ಮಾಡು ಮನುಸ ನೀ ಇರೋದು ಮೂರು ದಿವಸ
ಒಳಿತು ಮಾಡು ಮನುಸ ನೀ ಇರೋದು ಮೂರು ದಿವಸ
ಉಸಿರು ನಿಂತ ಮೇಲೆ ನಿನ್ನ ಹೆಸರು ಹೇಳುತಾರ
ಉಸಿರು ನಿಂತ ಮೇಲೆ ನಿನ್ನ ಹೆಸರು ಹೇಳುತಾರ
ಹೆಣ ಅನ್ನುತಾರ ಮಣ್ಣಾಗ ಹೂಳುತಾರ
ಚಟ್ಟ ಕಟ್ಟುತಾರ ನಿನ್ನ ಸುಟ್ಟು ಹಾಕುತಾರ
ಒಳಿತು ಮಾಡು ಮನುಸ ನೀ ಇರೋದು ಮೂರು ದಿವಸ । ।ಒಳಿತು ॥

ಮೂರು ದಿನದ ಸಂತೆ ನಗುನಗುತಾ ಮಾಡಬೇಕು
ದ್ವೇಷವೆಂಬ ಕಂತೆ ನೀ ಸುಟ್ಟು ಹಾಕಬೇಕು
ಮೂರು ದಿನದ ಸಂತೆ ನಗುನಗುತಾ ಮಾಡಬೇಕು
ದ್ವೇಷವೆಂಬ ಕಂತೆ ನೀ ಸುಟ್ಟು ಹಾಕಬೇಕು
ಪ್ರೀತಿ ಪ್ರೇಮ ಹಂಚಿ ನೀ ಹೋಗಬೇಕು ಅಲ್ಲಿ
ಸತ್ತ ಮೇಲೂ ನಿನಗೆ ಹೆಸರು ಉಂಟು ಇಲ್ಲಿ
ಪ್ರೀತಿ ಪ್ರೇಮ ಹಂಚಿ ನೀ ಹೋಗಬೇಕು ಅಲ್ಲಿ
ಸತ್ತ ಮೇಲೂ ನಿನಗೆ ಹೆಸರು ಉಂಟು ಇಲ್ಲಿ
ಭೂಮಿಯಲ್ಲಿರೋದು ಬಾಡಿಗೆ ಮನೆಯಾಗೆ
ಮೇಲೆ ಹೋಗಬೇಕು ನಮ್ಮ ಸ್ವಂತ ಮನೆಗೆ
ಬರಲು ಏನು ತಂದೆ ಬರದು ಏನು ಹಿಂದೆ
ಏ.. ... ॥ ಒಳಿತು ॥

ಸ್ವರ್ಗ ನರಕ ಎಲ್ಲಾ ಮೇಲಿಲ್ಲ ಕೇಳು ಜನಕ
ಇಲ್ಲೆ ಕಾಣಬೇಕು ಉಸಿರಿರೋ ಕೊನೆತನಕ
ಸ್ವರ್ಗ ನರಕ ಎಲ್ಲಾ ಮೇಲಿಲ್ಲ ಕೇಳು ಜನಕ
ಇಲ್ಲೆ ಕಾಣಬೇಕು ಉಸಿರಿರೋ ಕೊನೆತನಕ
ನಾನು ನಾನು ಎಂದು ಮೆರೆಯಬ್ಯಾಡ ಮೂಡ
ನಾನು ಎಂಬುದು ಮಣ್ಣು ಮರೆತು ಹೋಗಬೇಡ
ನಾನು ನಾನು ಎಂದು ಮೆರೆಯಬ್ಯಾಡ ಮೂಡ
ನಾನು ಎಂಬುದು ಮಣ್ಣು ಮರೆತು ಹೋಗಬೇಡ
ದ್ವೇಷವೆಂಬ ವಿಷವ ಸುರಿಯಬೆಡ ಮೂಡ
ಪ್ರೀತಿ ಅಮೃತವ ಒಮ್ಮೆ ಸವಿದು ನೋಡ
ಅದೇ ಸ್ವರ್ಗ ಕೇಳ ಮನುಜನಾಗಿ ಬಾಳ
ಏ.. ... ॥ ಒಳಿತು ॥

# PRERANA REPORT 2020-2021

**Extending a helping hand during Covid:**

The Prerana Social Centre extended its helping hand during the pandemic by freely distributing essential commodities like rice, ration, masks and sanitizer in Jagalur taluk. The details as follow:

| Sl. No | Date | Name of the Village/Place | Number of Kits |
|---|---|---|---|
| 01 | 07-04-2020 | T. P. Halli | 20 |
| 02 | 08-04-2020 | Jagalur Town | 48 |
| 03 | 09-04-2020 | Indira Badavane, Jagalur | 31 |
| 04 | 13-04-2020 | Municipality Labourers | 12 |
| 05 | 14-04-2020 | Horakere, Jagalur | 20 |
| 06 | 15-04-2020 | Prerana Social Centre, Jagalur | 27 |
| 07 | 16-04-2020 | Slum People, Ashwathareddy Nagara | 24 |
| 08 | 17-04-2020 | Post Office Road, Jagalur | 23 |
| 09 | 18-04-2020 | Shettygondanahalli | 25 |
| 10 | 19-04-2020 | Prerana Social Centre | 34 |
| 11 | 20-04-2020 | Navachethana School, Jagalur | 15 |
| 12 | 21-04-2020 | Kotigere Thanda | 20 |
| 13 | 22-04-2020 | Muslim Colony, Jagalur | 18 |
| 14 | 24-04-2020 | Jiddikere | 12 |
| 15 | 01-05-2020 | Rasthemake | 28 |
| 16 | 02-05-2020 | Malammaahalli | 31 |
| 17 | 04-05-2020 | Kodadagudda | 25 |
| 18 | 07-05-2020 | Bidarikere Hosur & Dyaanahalli | 42 |
| 19 | 11-05-2020 | Maharajanahatti | 27 |
| 20 | 13-05-2020 | Prerana Social Centre – Press reporters | 22 |
| 21 | 14-05-2020 | Prerana Social Centre | 25 |
| 22 | | Prerana Social Centre | 22 |
| 23 | | Prerana Social Centre | 18 |
| 24 | 21-05-2020 | Prerana Social Centre | 17 |
| 25 | | Prerana Social Centre | 26 |
| 26 | | Marenahalli | 28 |
| 27 | 01-07-2020 | Lakkampura | 23 |
| 28 | 02-07-2020 | Siddammanahalli | 29 |
| 29 | 03-07-2020 | 400 Masks and ten liters of Sanitizer for Asha Workers | 172 |
| 30 | 06-07-2020 | Distribution of Masks in Jagalur | 800 |

**Free distribution of Masks and Pads for the Rag-pickers:**

Covid-19 troubled everyone's life. Prerana Social Centre tried its level best to support the poor by providing ration kits, masks, sanitizers and by conducting awareness programmes. On July 19, 2020, Prerana reached out its helping hand towards the rag-pickers' families. Awareness about Covid-19, free distribution of masks and Pads was done. Miss Veena, vice President of AIST of Karnataka was the resource person of the day.

**Free distribution of Ration and Vegetables to Slum People:**

Due to the pandemic and the existing lockdown, the poor people had a difficult time with their basic needs even for a meal. Here the Prerana Social Centre, Jagalur, came to their aid on July 27, 2020 by distributing ration and vegetables for 40 families who were living in slum areas. Mrs. Shaheena Begum, Fr Anthon Souz and Br Stany Listan Pinto were present.

**Covid Awareness and Distribution of Masks**

On July 29, 2020 Prerana Social Centre organised Covid awareness programme for the people of Devikere village. Mr Vincent and Mr Shiv Prasad were the resource persons from Yenepoya Hospital, Deralakatte, Mangalore. After the programme all the people were given surgical masks. Mr Tippeswami LIC agent, Mrs. Shaheena Begam, Fr. Anthon Souz and Br Stay Pinto were other guests of honour.

**Towards quality Education**

Prerana Social Centre on August 4, 2020 extended its helping hand towards an orphan girl Megha and a poor girl Jyothi to pursue their studies. The Centre helped them in the purchase of books and paid the college fees. This is a step towards the needy in helping them to study and build a brighter future.

**Sick people are uplifted**

On August 24, 2020 the Prerana Social Centre financially helped Boramma from T. P. Halli to regain her health by providing necessary medicines for her treatment. Later she was also given rice and household groceries which are basic for her survival.

**Sanitizer Distributed**

On September 1, 2020 the Prerana Social Centre freely distributed five litres of sanitizer to the Navachetana School children. During these days the high school children were attending Vidhya gaama classes in the school. The main intention of giving the sanitizer was to protect the children from the prevailing pandemic. During this time Mr. Dr. Aravind P.S., Secretary of the School, Advocate Mr. Karibasayya, Frs. William Miranda and Sunil D'Souza were present.

**Poor family taken into confidence**

Due to the pandemic many poor families were struggling even for a single meal. Seeing this situation in the society the Prerana Social centre came forward on September 2, 2020 and distributed ration to a poor family of Jyothi. Miss Veena, the State vice president of AISF was present during this occasion.

**Help towards Education**

On September 9, 2020 the Prerana Social Centre extended its helping hand to Miss Gangamma to complete her MBA studies in Davanagere.

**Souvenir Released**

On October 27, 2020 a documentary book of Prerana Social Centre, Jagalur, was released by Fr Henry Moras OCD, Superior of Carmel Bhavan, Huvina Hadagali. At this time, Frs. Denis Misquith, Victor Pais, Denzil Veigas, Anthon Souz, Sunil D'Souza, Kevin Fernandes, William Miranda and Bros. Stany Pinto and Jesvin Benoy were present. This souvenir illustrates the social programmes of the centre which were done in the past years.

**Formation of the Representatives of SHG**

On November 4, 2020 one day quarterly meeting for the representatives of Self Help Group (SHG) was organised by Prerana Social Centre, Jagalur, in its auditorium. Fr William Miranda, Director of the Centre inaugurated the meeting by lighting the lamp. The Regional Director of Shri Dharmasthala Rural Development Mr. Dugge Gouda, District Director Mr Janardana, Project Officer Mr Gunakar were the guests of honour of the day.

**Health Care towards Cancer Patients**

On November 24, 2020 the Prerana Social Centre organised a health care programme for cancer patients.

**Shelter towards orphans**

The Prerana Social Centre at Jagalur on November 28, 2020 renovated the house of two orphan

